    7. ಶ್ರೀಕಾಂತ(2015), '' ಯೋಗದಿಂದ ಕೌಶಲ್ಯದ ಬೆಳವಣಿಗೆ'', ಪ್ರಚಾರೋಪನ್ಯಾಸ, ಶ್ರೀ ರಾಮ ಪ್ರಥಮ ದರ್ಜೆ ಕಾಲೇಜು, ಕಲ್ಲಡ್ಕ, 23ನೇ ಜನವರಿ.
    8. ಉದಯಕುಮಾರ ಕೆ.(2015), '' ಯೋಗದಿಂದ ಮಾನಸಿಕ ಒತ್ತಡದ ನಿರ್ವಹಣೆ'', ಪ್ರಚಾರೋಪನ್ಯಾಸ, ಶ್ರೀ ದುರ್ಗಾಪರಮೇಶ್ವರಿ ಪ್ರಥಮ ದರ್ಜೆ ಕಾಲೇಜು, ಕಟೀಲು, 11ನೇ ಫೆಬ್ರವರಿ.
    9. ಶರ್ಮ ಕೆ.ಕೆ.(2015), ''ಪರಿಣಾಮಕಾರಿ ಅಧ್ಯನಕ್ಕೆ ಯೋಗ'', ಪ್ರಚಾರೋಪನ್ಯಾಸ, ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ಕಾಲೇಜು, ಸುಬ್ರಹ್ಮಣ್ಯ, 3ನೇ ಫೆಬ್ರವರಿ.
    10. ಶರ್ಮ ಕೆ. ಕೆ.(2015), ''ಪರೀಕ್ಷಾ ಸಮಯದಲ್ಲಿ ಜೀವನ ಶೈಲಿ'', ಪ್ರಚಾರೋಪನ್ಯಾಸ, ಮ್ಯಾಪ್ಸ್ ಕಾಲೇಜು, ಮಂಗಳೂರು, 28ನೇ ಫೆಬ್ರವರಿ.

ಯೋಗ ತರಬೇತಿ ಶಿಬಿರವನ್ನು ಈ ಕೆಳಗಿನ ಸ್ಥಳಗಳಲ್ಲಿ ಆಯೋಜಿಸಲಾಯಿತು

ಕ್ರ. ಸಂ.	ಸ್ಥಳ
1.	ಪುರುಷರ ವಸತಿ ನಿಲಯ, ಮಂಗಳೂರು ವಿಶ್ವವಿದ್ಯಾನಿಲಯ
2.	ಮಾನವಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ
3.	ಮಹಿಳೆಯರ ವಸತಿ ನಿಲಯ, ಮಂಗಳೂರು ವಿಶ್ವವಿದ್ಯಾನಿಲಯ
4.	ಕೆ.ಎಸ್.ಆರ್.ಪಿ., ಆಸ್ಯೆಗೋಳಿ, ಕೊಣಾಜೆ.
5	ಮಹಿಳೆಯರ ವಸತಿ ನಿಲಯ, ಮಂಗಳೂರು ವಿಶ್ವವಿದ್ಯಾನಿಲಯ

37. ಡಾ. ಕೆ. ಶಿವರಾಮ ಕಾರಂತ ಪೀಠ : –

ನಿರ್ದೇಶಕರು : ಪ್ರೊ. ಸಬಿಹಾ

38. ಡಾ. ಪಿ.ದಯಾನಂದ ಪೈ ಮತ್ತು ಶ್ರೀ ಪಿ.ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರ

ನಿರ್ದೇಶಕರು : ಪ್ರೊ.ಕೆ.ಚಿನ್ನಪ್ಪ ಗೌಡ

2014–15ರ ಸಾಲಿನ ಕಾರ್ಯಚಟುವಟಿಕೆಗಳ ವರದಿ

ಮಂಗಳೂರು ವಿಶ್ವವಿದ್ಯಾನಿಲಯದ ಡಾ.ಪಿ.ದಯಾನಂದ ಪೈ ಮತ್ತು ಶ್ರೀ ಪಿ.ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರವು ಯಕ್ಷಗಾನದ ಅಧ್ಯಯನ, ಪ್ರಕಟಣೆ, ಸಂವರ್ಧನೆ ಮತ್ತು ಸಂರಕ್ಷಣೆಗಾಗಿ ಡಾ.ಪಿ.ದಯಾನಂದ ಪೈ ಮತ್ತು ಶ್ರೀ ಪಿ.ಸತೀಶ್ ಪೈ ಅವರ ಆರ್ಥಿಕ ಅನುದಾನದಿಂದ 2009ರಲ್ಲಿ ಅಸ್ತಿತ್ವಕ್ಕೆ ಬಂದಿರುತ್ತದೆ. ಯಕ್ಷಗಾನದ ವಿದ್ವಾಂಸರು, ಕಲಾವಿದರು, ಸಹೃದಯಿ ಪ್ರೇಕ್ಷಕರ ಅನುಸಂಧಾನದ ಮೂಲಕವೇ ಯಕ್ಷಗಾನ ಅಧ್ಯಯನ ಕೇಂದ್ರವನ್ನು ರೂಪಿಸಬೇಕೆಂಬುದು ಯಕ್ಷಗಾನ ಅಧ್ಯಯನ ಕೇಂದ್ರದ ಆಶಯವಾಗಿದೆ. ಯಕ್ಷಗಾನವನ್ನು ತೆಂಕು–ಬಡಗು ಅಥವಾ ಮೂಡಲಪಾಯ–ಪಡುವಲಪಾಯ ಎಂಬ ಸೀಮಿತ ಚೌಕಟ್ಟಿಗೊಳಪಡಿಸದೆ ಯಕ್ಷಗಾನದ ಇತರ ಸಂವಾದಿ ಕಲೆಗಳೂ ಒಳಗೊಳ್ಳುವಂತೆ ಎಲ್ಲವನ್ನೂ ಯಕ್ಷಗಾನದ ವಿಶಾಲ ವ್ಯಾಪ್ತಿಯೊಳಗೆ ತಂದು ಇದರ ಕುರಿತಂತೆ ಅಧ್ಯಯನ ಮತ್ತು ಸಂಗ್ರಹ, ಯಕ್ಷಗಾನಕ್ಕೆ ಸಂಬಂಧಪಟ್ಟ ಪ್ರಚಾರೋಪನ್ಯಾಸಗಳು, ಪ್ರಾತ್ಯಕ್ಷಿಕೆ, ಯಕ್ಷಗಾನ ಪ್ರದರ್ಶನಗಳನ್ನು ಏರ್ಪಡಿಸುವುದು, ವಿಚಾರಸಂಕಿರಣಗಳು, ಕಾರ್ಯಾಗಾರ, ದಾಖಲಾತಿ, ಯಕ್ಷಗಾನದ ಕಲಿಕೆ, ಸಂಶೋಧಕರಿಗೆ, ವಿದ್ಯಾರ್ಥಿಗಳಿಗೆ, ಕಲಾವಿದರಿಗೆ ಮುಖ್ಯ ಆಕರವಾಗಬಲ್ಲ ಸುಸಜ್ಜಿತ ಯಕ್ಷವಾಙ್ಮಯ ಗ್ರಂಥಾಲಯದ ನಿರ್ಮಾಣ, ವ್ಯವಸ್ಥಿತವಾದ ಮತ್ತು ಅನನ್ಯವಾದ ವಸ್ತುಸಂಗ್ರಹಾಲಯದ ನಿರ್ಮಾಣ ಮತ್ತು ಆಡಿಯೋ – ವೀಡಿಯೋ ಸಿಡಿಗಳನ್ನು ಒಳಗೊಂಡ ಆರ್ಕೈವ್ ಮಾದರಿಯ ಸಂಗ್ರಹ, ಸ್ಥಳೀಯ ಕಲಾವಿದರಿಗೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಯಕ್ಷಗಾನ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿಕೊಡುವುದು – ಇಂತಹ ಬಹುಮುಖಿ ಉದ್ದೇಶಗಳನ್ನು ಯಕ್ಷಗಾನ ಅಧ್ಯಯನ ಕೇಂದ್ರವು ಹೊಂದಿದೆ. ಈ ನಿಟ್ಟಿನಲ್ಲಿ, ಯಕ್ಷಗಾನ ಅಧ್ಯಯನ ಕೇಂದ್ರವು ಕಾರ್ಯನಿರ್ವಹಿಸುತ್ತಿದೆ.

1. ಯಕ್ಷಮಂಗಳ ಪ್ರಶಸ್ತಿ, ಕೃತಿ ಪ್ರಶಸ್ತಿ ಪ್ರದಾನ ಸಮಾರಂಭ

ಮಂಗಳೂರು ವಿಶ್ವವಿದ್ಯಾನಿಲಯದ ಡಾ.ಪಿ.ದಯಾನಂದ ಪೈ ಮತ್ತು ಶ್ರೀ ಪಿ.ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದ **ಯಕ್ಷಮಂಗಳ ಪ್ರಶಸ್ತಿ** ಮತ್ತು **ಕೃತಿ ಪ್ರಶಸ್ತಿ** ಪ್ರದಾನ ಸಮಾರಂಭವು ದಿನಾಂಕ 09.10.2014 ಗುರುವಾರದಂದು ಮಂಗಳಗಂಗೋತ್ರಿಯ **ಮಂಗಳ ಸಭಾಂಗಣ**ದಲ್ಲಿ ಜರುಗಿತು. 2014ರ ಸಾಲಿನ **ಯಕ್ಷಮಂಗಳ ಪ್ರಶಸ್ತಿ**ಯನ್ನು ಯಕ್ಷಗಾನ ಸಂಶೋಧಕರು ಹಾಗೂ ಪ್ರಸಂಗಕರ್ತರಾದ **ಪ್ರೊ.ಅಮೃತ ಸೋಮೇಶ್ವರ** ಮತ್ತು ಯಕ್ಷಗಾನದ ಪ್ರಸಿದ್ಧ ಕಲಾವಿದರಾದ **ಗುರು ಬನ್ನಂಜೆ ಶ್ರೀ ಸಂಜೀವ ಸುವರ್ಣ** ಅವರಿಗೆ ಪ್ರದಾನಮಾಡಲಾಯಿತು. **ಡಾ.ಕೆ.ಎಂ.ರಾಘವನಂಬಿಯಾರ್** ಅವರ **ಹಿಮ್ಮೇಳ** ಕೃತಿಗೆ **ಯಕ್ಷಮಂಗಳ ಕೃತಿ ಪ್ರಶಸ್ತಿ**ಯನ್ನು ಪ್ರದಾನ ಮಾಡಲಾಯಿತು. ಕ್ರೀಡಾ ಮತ್ತು ಯುವಜನ ಸೇವಾ ಸಚಿವ ಶ್ರೀ ಕೆ.ಅಭಯಚಂದ್ರ ಜೈನ್ ಸಾಧಕರಿಗೆ ಪ್ರಶಸ್ತಿ ಪ್ರದಾನಮಾಡಿದರು. ಮಂಗಳೂರು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿ ಪ್ರೊ.ಕೆ.ಭೈರಪ್ಪ ಅವರು ಅಧ್ಯಕ್ಷತೆ ವಹಿಸಿದ್ದರು. ಯಕ್ಷಗಾನ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ.ಕೆ.ಚಿನ್ನಪ್ಪ ಗೌಡ ಅವರು ಪ್ರಸ್ತಾವನೆಗೈದರು. ಪ್ರೊ.ಎಂ.ಎಲ್.ಸಾಮಗ ಮತ್ತು ಪ್ರೊ.ಪಾದೇಕಲ್ಲು ವಿಷ್ಣುಭಟ್ಟ ಅವರು ಅಭಿನಂದನಾ ಭಾಷಣಮಾಡಿದರು. ಯಕ್ಷಗಾನ ಅಧ್ಯಯನ ಕೇಂದ್ರದ ಪ್ರಾಯೋಜಕರಾದ ಡಾ.ಪಿ.ದಯಾನಂದ ಪೈ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಪ್ರಶಸ್ತಿಪ್ರದಾನ ಸಮಾರಂಭದ ಬಳಿಕ ಗುರು ಬನ್ನಂಜೆ ಶ್ರೀ ಸಂಜೀವ ಸುವರ್ಣ ಅವರ ನಿರ್ದೇಶನದಲ್ಲಿ ಯಕ್ಷಗಾನ ಪೂರ್ವರಂಗ ಪ್ರಾತ್ಯಕ್ಷಿಕೆ ಹಾಗೂ **ಜಾಂಬವತಿ ಕಲ್ಯಾಣ** ಯಕ್ಷಗಾನ ಪ್ರದರ್ಶನವು ನಡೆಯಿತು.

2. ಯಕ್ಷಗಾನ ತಾಳಮದ್ದಳೆ

ಮಂಗಳೂರು ವಿಶ್ವವಿದ್ಯಾನಿಲಯದ ಡಾ.ಪಿ.ದಯಾನಂದ ಪೈ ಮತ್ತು ಶ್ರೀ ಪಿ.ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ **ವೀರಮಣಿ** ಯಕ್ಷಗಾನ ತಾಳಮದ್ದಳೆಯು 6 ಸಪ್ಟೆಂಬರ್ 2014ರಂದು ಶನಿವಾರ ಮಂಗಳ ಸಭಾಂಗಣದಲ್ಲಿ ಜರುಗಿತು. ಕಾರ್ಯಕ್ರಮವನ್ನು ಮಾನ್ಯ ಕುಲಪತಿಗಳಾದ ಪ್ರೊ.ಕೆ.ಭೈರಪ್ಪ ಅವರು ದೀಪಬೆಳಗುವ ಮೂಲಕ ಸಾಂಕೇತಿಕವಾಗಿ ಉದ್ಘಾಟಿಸಿದರು. ಕೇಂದ್ರದ ನಿರ್ದೇಶಕರಾದ ಡಾ.ಕೆ.ಚಿನ್ನಪ್ಪ ಗೌಡ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕಲಾವಿದರಾದ ಶ್ರೀ ಕುಂಬ್ಳೆ ಸುಂದರ್ ರಾವ್, ಡಾ.ಎಂ.ಪ್ರಭಾಕರ ಜೋಶಿ, ಪ್ರೊ.ಎಂ.ಎಲ್.ಸಾಮಗ ಹಾಗೂ ಶ್ರೀ ಜಬ್ಬಾರ್ ಸಮೊ ಅವರು ತಾಳಮದ್ದಳೆಯಲ್ಲಿ ಕಲಾವಿದರಾಗಿ ಭಾಗವಹಿಸಿದ್ದರು.

3. ಮಕ್ಕಳ ತಂಡಗಳಿಂದ ಯಕ್ಷಗಾನ ಪ್ರದರ್ಶನ

ಯಕ್ಷಗಾನ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ಮಕ್ಕಳು ಮತ್ತು ಕಾಲೇಜು ವಿದ್ಯಾರ್ಥಿಗಳ ಯಕ್ಷಗಾನ ತಂಡಗಳಿಗೆ ಪ್ರದರ್ಶನಕ್ಕೆ ಅವಕಾಶ ನೀಡುವ ಹಿನ್ನೆಲೆಯಲ್ಲಿ ಮಂಗಳಗಂಗೋತ್ರಿಯ ಮಂಗಳ ಸಭಾಂಗಣದಲ್ಲಿ 27.10.2014ರಂದು ಶ್ರೀ ದುರ್ಗಾಪರಮೇಶ್ವರಿ ಯಕ್ಷಗಾನ ಕಲಾರಂಗ, ಮಂದಾರ್ತಿ ಮತ್ತು ಮೂಡಬಿದಿರೆಯ ಆಳ್ವಾಸ್ ಕಾಲೇಜಿನ ಧೀಂಕಿಟ ಯಕ್ಷಗಾನ ಕೇಂದ್ರದಿಂದ ಯಕ್ಷಗಾನ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಶ್ರೀ ಟಿ.ಹಿರಿಯಣ್ಣ ಶೆಟ್ಟಿಗಾರ್ ತಂತ್ರಾಡಿ ಇವರ ನಿರ್ದೇಶನದಲ್ಲಿ ಶ್ರೀ ದುರ್ಗಾಪರಮೇಶ್ವರಿ ಯಕ್ಷಗಾನ ಕಲಾರಂಗ, ಮಂದಾರ್ತಿ ಇವರಿಂದ ಪೌರಾಣಿಕ ಕಥಾ ಪ್ರಸಂಗ **ಕುಶ–ಲವ** ಹಾಗೂ ಶ್ರೀ ಸದಾಶಿವ ಶೆಟ್ಟಿಗಾರ್ ಕಿನ್ನಿಗೋಳಿ ಇವರ ನಿರ್ದೇಶನದಲ್ಲಿ ಆಳ್ವಾಸ್ ಕಾಲೇಜಿನ ಧೀಂಕಿಟ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಗಳಿಂದ **ಸಾಯುಜ್ಯ ಸಂಗ್ರಾಮ** ಯಕ್ಷಗಾನ ಪ್ರದರ್ಶನವು ನಡೆಯಿತು.

4. ಉಚಿತ ಯಕ್ಷಗಾನ ತರಬೇತಿ ಮತ್ತು ಯಕ್ಷಮಂಗಳ ತಂಡದಿಂದ ಪ್ರದರ್ಶನ

ಎಳೆಯ ವಿದ್ಯಾರ್ಥಿಗಳಲ್ಲಿ ಯಕ್ಷಗಾನದ ಆಸಕ್ತಿಯನ್ನು ಮೂಡಿಸುವ ಉದ್ದೇಶದಿಂದ ಕಳೆದ ವರ್ಷ ಮಂಗಳೂರು ವಿಶ್ವವಿದ್ಯಾನಿಲಯದ ಆಸುಪಾಸಿನ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಆಸಕ್ತ ವಿದ್ಯಾರ್ಥಿಗಳಿಗೆ ಸುಮಾರು ಆರು ತಿಂಗಳ ಕಾಲ ಯಕ್ಷಗಾನದ ಹೆಜ್ಜೆ, ನಾಟ್ಯದ ಉಚಿತ ತರಬೇತಿ ನೀಡಿ ವಿದ್ಯಾರ್ಥಿಗಳ ಯಕ್ಷಮಂಗಳ ತಂಡವನ್ನು ಕಟ್ಟಿ, ಯಶಸ್ವಿ ಪ್ರದರ್ಶನವನ್ನು ನೀಡಲಾಗಿತ್ತು. ಪ್ರಸ್ತುತ ವರ್ಷದಲ್ಲಿ ಮಂಗಳಗಂಗೋತ್ರಿಯ ಸ್ನಾತಕೋತ್ತರ ವಿದ್ಯಾರ್ಥಿಗಳ ಯಕ್ಷಮಂಗಳ ತಂಡವನ್ನು ಕಟ್ಟಿ, ಯಕ್ಷಗಾನ ಪ್ರದರ್ಶನ ನೀಡಲು ನಿರ್ಧರಿಸಿ, ಆಸಕ್ತ ವಿದ್ಯಾರ್ಥಿಗಳಿಗೆ ಆಳ್ವಾಸ್ ಕಾಲೇಜಿನ ಧೀಂಕಿಟ ಯಕ್ಷಗಾನ ಅಧ್ಯಯನ ಕೇಂದ್ರದ ನಿರ್ದೇಶಕ ಸದಾಶಿವ ಶೆಟ್ಟಿಗಾರ್ ಕಿನ್ನಿಗೋಳಿ ಅವರಿಂದ ಸುಮಾರು 30 ವಿದ್ಯಾರ್ಥಿಗಳಿಗೆ ಕೇಂದ್ರದಲ್ಲಿ ಯಕ್ಷಗಾನದ ಹೆಜ್ಜೆಗಾರಿಕೆ ಹಾಗೂ ಪ್ರದರ್ಶನದ ಬಗ್ಗೆ ಒಂದು ತಿಂಗಳ ತರಬೇತು ನೀಡಲಾಯಿತು. 2015, ಮಾರ್ಚ್ 20 ಶುಕ್ರವಾರದಂದು ಮಂಗಳೂರು ವಿಶ್ವವಿದ್ಯಾನಿಲಯದ ಮಂಗಳಸಭಾಂಗಣದಲ್ಲಿ ತರಬೇತು ಪಡೆದ ಸ್ನಾತಕೋತ್ತರ ವಿದ್ಯಾರ್ಥಿಗಳ ಯಕ್ಷಮಂಗಳ ತಂಡದಿಂದ **ಸುದರ್ಶನ ವಿಜಯ** ಎಂಬ ಯಕ್ಷಗಾನ ಪ್ರದರ್ಶನವು ಯಶಸ್ವಿಯಾಗಿ ನಡೆಯಿತು. ಬಳಿಕ ಪ್ರದರ್ಶನ ನೀಡಿದ ವಿದ್ಯಾರ್ಥಿಗಳನ್ನು ಹಾಗೂ ಹಿಮ್ಮೇಳ ಕಲಾವಿದರನ್ನು ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು.

5. ಕೃತಿಗಳ ಪ್ರಕಟನೆ:

ಯಕ್ಷಗಾನ ಅಧ್ಯಯನ ಕೇಂದ್ರದ ಯಕ್ಷಮಂಗಳ ಕೃತಿಮಾಲಿಕೆಯಲ್ಲಿ ಒಟ್ಟು ಎಂಟು ಕೃತಿಗಳು ಪ್ರಕಟಣೆಗೊಂಡಿದ್ದು, ಪ್ರಸ್ತುತ ವರ್ಷ ಮಂಗಳೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಆರ್ಥಿಕ ನೆರವಿನಿಂದ ಕೇಂದ್ರದ ಪ್ರಕಟನೆಗಳಾದ **ಯಕ್ಷಗಾನ ಸ್ಥಿತಿಗತಿ, ಬಲಿಪ ಗಾನ–ಯಾನ, ಯಕ್ಷಗಾನ ಪ್ರಸಂಗ ಸಂಪುಟ** ಎಂಬ ಮೂರು ಕೃತಿಗಳನ್ನು ಪ್ರಸಾರಾಂಗದ ೨೫ನೇ ವರ್ಷದ **ರಜತ ಸಂಭ್ರಮ** ಕಾರ್ಯಕ್ರಮದಲ್ಲಿ ಬಿಡುಗಡೆಗೆ ಸಿದ್ಧಪಡಿಸಲಾಗಿದೆ.

6. ಸಹಯೋಗದ ಕಾರ್ಯಕ್ರಮಗಳು : ಕಾರ್ಯಾಗಾರ/ವಿಚಾರಗೋಷ್ಠಿ/ಕಮ್ಮಟ/ಪ್ರಾತ್ಯಕ್ಷಿಕೆ/ಯಕ್ಷಗಾನ ಸ್ಪರ್ಧೆ

ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಯಕ್ಷಗಾನ ಅಧ್ಯಯನ ಕೇಂದ್ರವು ವಿವಿಧ ಸಂಘ ಸಂಸ್ಥೆಗಳ ಸಹಭಾಗಿತ್ವದಲ್ಲಿ ಯಕ್ಷಗಾನಕ್ಕೆ ಸಂಬಂಧಿಸಿದ ವಿಚಾರಗೋಷ್ಠಿ, ಕಾರ್ಯಾಗಾರ, ಕಮ್ಮಟ, ಪ್ರಾತ್ಯಕ್ಷಿಕೆ, ಯಕ್ಷಗಾನ ಸ್ಪರ್ಧೆ ಇತ್ಯಾದಿ ಕಾರ್ಯಕ್ರಮಗಳನ್ನು ವಿವಿಧೆಡೆ ಏರ್ಪಡಿಸಿದ್ದು ವಿವರಗಳು ಕೆಳಗಿನಂತಿವೆ.

6.1 ಯಕ್ಷಶಾಲ್ಮಲ (ರಿ) ಶಿರಸಿ, ಉತ್ತರಕನ್ನಡ ಇದರ ಸಹಭಾಗಿತ್ವದೊಂದಿಗೆ **ಅಭಿನಯಾನುಸಂಧಾನ –2** (ಅಭಿನಯ ವಿಸ್ತಾರ, ಪ್ರಾತ್ಯಕ್ಷಿಕೆ, ಚರ್ಚೆ, ಪ್ರದರ್ಶನ) ಕಾರ್ಯಕ್ರಮವು ಆಗಸ್ಟ್ 23–25, 2014ರಂದು ಶಿರಸಿಯ ಸುಧರ್ಮ ಸಭಾಭವನದಲ್ಲಿ ನಡೆಸಲಾಗಿದೆ.

6.2 ಕಲಾ ಸಂಗಮ ಸಾಂಸ್ಕೃತಿಕ ವೇದಿಕೆ – ಮಂಗಳೂರು ಇದರ ಸಹಭಾಗಿತ್ವದಲ್ಲಿ ಮಂಗಳೂರಿನ ಡಾನ್ ಬಾಸ್ಕೊ ಹಾಲ್‌ನಲ್ಲಿ 12.10.2014ರಂದು **ಯಕ್ಷಸಿರಿ – 2014** ಎಂಬ ಶೀರ್ಷಿಕೆಯಲ್ಲಿ ಯಕ್ಷಗಾನ ಪ್ರದರ್ಶನ, ಪ್ರತಿಭಾ ಪುರಸ್ಕಾರ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ– ಮೊದಲಾದ ಕಾರ್ಯಕ್ರಮಗಳನ್ನು ನಡೆಸಲಾಗಿತ್ತು.

6.3 ಉಡುಪಿಯ ಯಕ್ಷಗಾನ ಕಲಾರಂಗ – ಇದರ ಸಹಭಾಗಿತ್ವದಲ್ಲಿ **ಬಣ್ಣದ ಬಿನ್ನಾಣ** (ಬಣ್ಣದ ವೇಷದ ಕಮ್ಮಟ) ಕಾರ್ಯಕ್ರಮವನ್ನು 16.11.2014ರಂದು ಉಡುಪಿಯ ರಾಜಾಂಗಣದಲ್ಲಿ ಏರ್ಪಡಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಉಪನ್ಯಾಸ ಮತ್ತು ಸಂವಾದ, ವಿವಿಧ ಬಣ್ಣದ ವೇಷಗಳ ಮುಖವರ್ಣಿಕೆ ಪ್ರಸ್ತುತಿ ಮತ್ತು ಬಣ್ಣದ ವೇಷಗಳ ಛಾಯಾಚಿತ್ರ ಪ್ರದರ್ಶನ – ಮೊದಲಾದ ಕಾರ್ಯಕ್ರಮಗಳನ್ನು ನಡೆಸಲಾಯಿತು.

6.4 ಯಕ್ಷಾಂಗಣ ಮಂಗಳೂರು ಸಂಸ್ಥೆಯ ಸಹಭಾಗಿತ್ವದಲ್ಲಿ **ಯಕ್ಷಗಾನ ತಾಳಮದ್ದಳೆ ಸಪ್ತಾಹ** ಕಾರ್ಯಕ್ರಮವನ್ನು ದಿನಾಂಕ 9ರಿಂದ 15 ನವೆಂಬರ್ 2014ರವರೆಗೆ ಏಳು ದಿನಗಳ ಕಾಲ ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜಿನ ರವೀಂದ್ರ ಕಲಾಭವನದಲ್ಲಿ ಏರ್ಪಡಿಸಲಾಯಿತು.

6.5 ಯಕ್ಷಲೋಕ, ಹಳದೀಪುರ, ಹೊನ್ನಾವರ ಇದರ ಸಹಭಾಗಿತ್ವದಲ್ಲಿ **ಕಡತೋಕ ಕೃತಿ–ಸ್ಮೃತಿ ಯಕ್ಷರಂಗೋತ್ಸವ – 2014** ಕಾರ್ಯಕ್ರಮವನ್ನು 2014 ಡಿಸೆಂಬರ್ 21–25ರವರೆಗೆ ಹೊನ್ನಾವರದ ಶ್ರೀ ಗೋಪಿನಾಥ ಸಭಾಗೃಹದಲ್ಲಿ ಜರಗಿತು. ಈ ಕಾರ್ಯಕ್ರಮದಲ್ಲಿ ಸಾಧಕರಿಗೆ ಪ್ರಶಸ್ತಿ ಪ್ರದಾನ, ಸನ್ಮಾನ, ತಾಳಮದ್ದಳೆ ತರಬೇತಿ ಶಿಬಿರ ಮತ್ತು ಯಕ್ಷಗಾನ ಪ್ರದರ್ಶನವನ್ನು ನಡೆಸಲಾಯಿತು.

6.6 ಮುಲ್ಕಿಯ ವಿಜಯ ಕಾಲೇಜು, ಯಕ್ಷಗಾನ ಸಂಘ ಇದರ ಸಹಭಾಗಿತ್ವದಲ್ಲಿ 2014 ಡಿಸೆಂಬರ್ 30–31ರವರೆಗೆ **ಯಕ್ಷವಿಜಯ ಕೇಸರಿ** ಎಂಬ ಶೀರ್ಷಿಕೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಮಟ್ಟದ ಅಂತರ್ ಕಾಲೇಜು ಯಕ್ಷಗಾನ ಸ್ಪರ್ಧೆಯನ್ನು ವಿಜಯ ಕಾಲೇಜು, ಮುಲ್ಕಿಯಲ್ಲಿ ನಡೆಸಲಾಗಿತ್ತು.

6.7 ಶ್ರೀ ಶಾರದಾ ಕಾಲೇಜು, ಬಸ್ರೂರು ಇದರ ಆಶ್ರಯದಲ್ಲಿ ಬಸ್ರೂರಿನ ಶ್ರೀ ಶಾರದಾ ಕಾಲೇಜಿನ ಯಕ್ಷಗಾನ ಅಧ್ಯಯನ ಕೇಂದ್ರದ ಸಹಭಾಗಿತ್ವದೊಂದಿಗೆ **ಯಕ್ಷಗಾನ ಪ್ರಸಂಗ ಸಾಹಿತ್ಯ: ಪರಂಪರೆ ಮತ್ತು ಪ್ರಯೋಗ ಎಂಬ ರಾಜ್ಯ ಮಟ್ಟದ ವಿಚಾರ ಸಂಕಿರಣ** ಕಾರ್ಯಕ್ರಮವನ್ನು ಜನವರಿ 10,2015ರಂದು ಏರ್ಪಡಿಸಲಾಯಿತು.

6.8 ಯಕ್ಷ ಕಲಾರಂಗ(ರಿ) ಕಾರ್ಕಳ, ಉಡುಪಿ ಇದರ ಸಹಯೋಗದಲ್ಲಿ **ಕಿಶೋರ ಯಕ್ಷೋತ್ಸವ – ೨೦೧೫** ಕಾರ್ಯಕ್ರಮವನ್ನು ಫೆಬ್ರವರಿ 6 – 8, 2015ರಂದು ಕಾರ್ಕಳದ ಕಸ್ತೂರಿ ಸಾಂಸ್ಕೃತಿಕ ರಂಗ ಮಂಟಪದಲ್ಲಿ ಏರ್ಪಡಿಸಲಾಯಿತು.

6.9 ಮಣಿಕೃಷ್ಣ ಸ್ವಾಮಿ ಅಕಾಡೆಮಿ (ರಿ), ಸುರತ್ಕಲ್ ಮಂಗಳೂರು ಇದರ ಸಹಭಾಗಿತ್ವದಲ್ಲಿ **ಯಕ್ಷಗಾನ–ಯಾನ–ಸಂವಹನ** ಕಾರ್ಯಕ್ರಮವನ್ನು 14.03.2015ರಂದು ಮಂಗಳೂರಿನ ಶಾರದಾ ವಿದ್ಯಾಲಯದ ಧ್ಯಾನ ಮಂದಿರದಲ್ಲಿ ಏರ್ಪಡಿಸಲಾಯಿತು.

7. ಯಕ್ಷಮಂಗಳ ವೀಡಿಯೋ ಪ್ರದರ್ಶನ ಮಂದಿರ

ಯಕ್ಷಗಾನ ಅಧ್ಯಯನ ಕೇಂದ್ರವು ಸುಸಜ್ಜಿತವಾದ ಹವಾನಿಯಂತ್ರಿತ ವಸ್ತು ಸಂಗ್ರಹಾಲಯವನ್ನು ಹೊಂದಿದೆ. ಯಕ್ಷಗಾನ ಸಾಕ್ಷ್ಯಚಿತ್ರ ಮತ್ತು ದೃಶ್ಯಶ್ರವ್ಯ ಸಿಡಿಗಳನ್ನು ಪ್ರದರ್ಶಿಸಲು ವೀಡಿಯೋ ಪ್ರದರ್ಶನ ಮಂದಿರವನ್ನು ರೂಪಿಸಲಾಗಿದ್ದು, ಮಿನಿಥಿಯೇಟರ್ ರೂಪದಲ್ಲಿರುವ ಈ ವೀಡಿಯೋ ಪ್ರದರ್ಶನ ಕೇಂದ್ರವು ಯಕ್ಷಗಾನದ ಪರಂಪರೆಯ ತಿಳುವಳಿಕೆಯನ್ನು ಮಕ್ಕಳಲ್ಲಿ ಮತ್ತು ಆಸಕ್ತರಲ್ಲಿ ಉಳಿಸಿಬೆಳೆಸುವಲ್ಲಿ ಅತ್ಯಂತ ಯಶಸ್ವಿಯಾಗಿದೆ.

8. ಯಕ್ಷಮಂಗಳ ವಸ್ತುಸಂಗ್ರಹಾಲಯ

ಮಂಗಳೂರು ವಿಶ್ವವಿದ್ಯಾನಿಲಯದ ಡಾ.ಪಿ.ದಯಾನಂದ ಪೈ ಮತ್ತು ಶ್ರೀ ಪಿ.ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದಲ್ಲಿ ಸುಸಜ್ಜಿತ ಹಾಗೂ ಅನನ್ಯವಾದ ಮಾದರಿ **ಯಕ್ಷಮಂಗಳ ವಸ್ತುಸಂಗ್ರಹಾಲಯ**ವಿದೆ. ಇಲ್ಲಿ ಯಕ್ಷಗಾನದ ಹಿಮ್ಮೇಳ ಹಾಗೂ ಮುಮ್ಮೇಳಕ್ಕೆ ಸಂಬಂಧಿಸಿದಂತೆ ಯಕ್ಷಗಾನದ ವಿವಿಧ ವೇಷಗಳ ಮಾದರಿಗಳು, ಮುಖವಾಡಗಳು, ವಿವಿಧ ವೇಷಗಳಿಗೆ ಅನುಸಾರವಾಗಿ ವಿವಿಧ ವಿನ್ಯಾಸದ ಕಿರೀಟಗಳು, ಮುಖವರ್ಣಿಕೆಗಳು – ಹೀಗೆ ತೆಂಕುತಿಟ್ಟು ಹಾಗೂ ಬಡಗುತಿಟ್ಟು ಯಕ್ಷಗಾನಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಮಾದರಿಗಳ ಪ್ರತಿಕೃತಿಗಳಿವೆ.

ಈ ವಸ್ತುಸಂಗ್ರಹಾಲಯಕ್ಕೆ ವಿದ್ಯಾರ್ಥಿಗಳು, ಕಲಾವಿದರು, ಸಂಶೋಧಕರು, ಆಸಕ್ತರು, ಗಣ್ಯವ್ಯಕ್ತಿಗಳು ಭೇಟಿ ನೀಡುತ್ತಿದ್ದಾರೆ. ಇವರಿಗೆ ಯಕ್ಷಗಾನದ ವೈವಿಧ್ಯ, ಮುಖವರ್ಣಿಕೆ, ವೇಷಭೂಷಣಗಳ ವ್ಯತ್ಯಾಸ, ವೈಶಿಷ್ಟ್ಯಗಳ ಕುರಿತ ಮಾಹಿತಿ ಹಾಗೂ ಸೂಕ್ತ ಮಾರ್ಗದರ್ಶನವನ್ನು ನೀಡಲಾಗುತ್ತಿದೆ. ಈ ವಸ್ತುಸಂಗ್ರಹಾಲಯದ ಎಲ್ಲಾ ರೀತಿಯ ನಿರ್ವಹಣೆಯನ್ನು ಸಮರ್ಥವಾಗಿ ಮಾಡಲಾಗುತ್ತಿದೆ.

9. ಯಕ್ಷವಾಙ್ಮಯ ಕೇಂದ್ರ

ಯಕ್ಷಗಾನ ಅಧ್ಯಯನ ಕೇಂದ್ರದ ಮೂಲ ಉದ್ದೇಶಗಳಲ್ಲಿ ಗ್ರಂಥಾಲಯದ ನಿರ್ಮಾಣವೂ ಒಂದು, ಈ ಗ್ರಂಥಾಲಯವನ್ನು ಯಕ್ಷಗಾನದ ಕುರಿತಂತೆ ಸಂಶೋಧನೆ ಮಾಡುವ ವಿದ್ಯಾರ್ಥಿಗಳಿಗೆ, ಮಾಹಿತಿ ಪಡೆಯಬಯಸುವ ಆಸಕ್ತರಿಗೆ, ಅಧ್ಯಯನಾಸಕ್ತರಿಗೆ, ಸಂಶೋಧನಾಸಕ್ತರಿಗೆ, ಕಲಾವಿದರಿಗೆ ಮುಖ್ಯ ಆಕರಕೇಂದ್ರವಾಗಿಸುವುದೂ ಕೂಡಾ ಆಗಿದೆ. ಈ ಹಿನ್ನೆಲೆಯಲ್ಲಿ ಯಕ್ಷಗಾನದ ವಿವಿಧ ಪ್ರಕಾರಗಳಾದ ತೆಂಕುತಿಟ್ಟು, ಬಡಗುತಿಟ್ಟು, ಘಟ್ಟದ ಕೋರೆ, ಮೂಡಲಪಾಯ, ಪಡುವಲಪಾಯ, ಶ್ರೀ ಕೃಷ್ಣ ಪಾರಿಜಾತ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಹಾಗೂ ಯಕ್ಷಗಾನಕ್ಕೆ ಸಂವಾದಿಯಾಗಿರುವ ಕೇರಳದ ಕಥಕ್ಕಳಿ, ಮೋಹಿನಿ ಆಟ್ಟಂ, ಆಂಧ್ರದ ವೀದಿನಾಟಕ; ತಮಿಳುನಾಡಿನ ತೆರಕುತ್ತು ಇತ್ಯಾದಿ ಪ್ರಕಾರಗಳಿಗೆ ಸಂಬಂಧಿಸಿದಂತೆ ಈಗಾಗಲೇ ಪ್ರಕಟಗೊಂಡ ಕೃತಿಗಳನ್ನು ಹಾಗೂ ಅಲಭ್ಯ ಕೃತಿಗಳ ನೆರಳಚ್ಚು ಪ್ರತಿಗಳನ್ನು ಒಳಗೊಂಡ ಮಾದರಿ ಗ್ರಂಥಾಲಯವನ್ನಾಗಿ ರೂಪಿಸಲಾಗುತ್ತಿದೆ. ಹಾಗಾಗಿ ಪ್ರಸ್ತುತ ವರ್ಷದಲ್ಲಿ ಯಕ್ಷಗಾನಕ್ಕೆ ಸಂಬಂಧಿಸಿದಂತೆ ಕನ್ನಡ, ತುಳು, ಹಿಂದಿ, ಸಂಸ್ಕೃತ, ಆಂಗ್ಲಭಾಷೆಯಲ್ಲಿರುವ ಕೃತಿಗಳನ್ನು ಗ್ರಂಥಾಲಯಕ್ಕೆ ಖರೀದಿಸಿ ಸೇರ್ಪಡೆಗೊಳಿಸಲಾಗಿದೆ. ಕೆಲವು ಅಲಭ್ಯ ಕೃತಿಗಳನ್ನು ವಿದ್ವಾಂಸರಿಂದ ಕಡಿಮೆ ದರದಲ್ಲಿ ಖರೀದಿಸಲಾಗಿದೆ. ಅಲಭ್ಯ ಕೃತಿಗಳ ನೆರಳಚ್ಚು ಪ್ರತಿಗಳನ್ನು ಗ್ರಂಥಾಲಯದಲ್ಲಿ ಸಮರ್ಪಕ ರೀತಿಯಲ್ಲಿ ಸಂರಕ್ಷಿಸಿಡಲಾಗಿದೆ ಹಾಗೂ ಅದರ ಸದುಪಯೋಗವಾಗುವಂತೆ ನೋಡಿಕೊಳ್ಳಲಾಗುತ್ತಿದೆ. ಗ್ರಂಥಾಲಯವನ್ನು ಆಕರವಾಗಿ ಬಳಸುವವರನ್ನು ದೃಷ್ಟಿಯಲ್ಲಿರಿಸಿಕೊಂಡು ಯಕ್ಷಗಾನಕ್ಕೆ ಸಂಬಂಧಿಸಿದಂತೆ ಅಪೂರ್ವ ದೃಶ್ಯ–ಶ್ರವ್ಯ ಸಿಡಿಗಳ ಸಂಗ್ರಹವನ್ನು ಮಾಡಲಾಗಿದೆ.

10. ಪೇಪರ್‌ಕಟ್ಟಿಂಗ್ಸ್

ಗ್ರಂಥಾಲಯದ ಭಾಗವಾಗಿ ದಿನಪತ್ರಿಕೆಗಳಲ್ಲಿ ಬಂದ ಯಕ್ಷಗಾನಕ್ಕೆ ಸಂಬಂಧಿಸಿದ ಲೇಖನಗಳನ್ನು ಕತ್ತರಿಸಿ ತಿಟ್ಟುಗಳಿಗನುಸಾರವಾಗಿ ವಿಂಗಡಿಸಿ, ಅದನ್ನು ವ್ಯಕ್ತಿಚಿತ್ರ, ವಿಮರ್ಶೆ, ಪ್ರದರ್ಶನ ಮೊದಲಾದ ವಿವಿಧ ಶೀರ್ಷಿಕೆಗಳಿಗೆ ಅನುಗುಣವಾಗಿ ವಿಂಗಡಿಸಿ, ಕಡತಗಳನ್ನು ಮಾಡಲಾಗಿದೆ. ಪತ್ರಿಕೆಗಳಲ್ಲಿ ಕೇಂದ್ರದ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ಬಂದ ಪ್ರಕಟಣೆಗಳನ್ನು ಕತ್ತರಿಸಿ, ಕಡತಗಳ ಮೂಲಕ ಸಂಗ್ರಹಿಸಿಡಲಾಗಿದೆ.

11. ಕೃತಿಗಳ ಮಾರಾಟ

ಯಕ್ಷಮಂಗಳ ಕೃತಿಮಾಲಿಕೆಯಲ್ಲಿ ಪ್ರಕಟವಾಗಿರುವ ಕೃತಿಗಳ ಮಾರಾಟದ ವ್ಯವಸ್ಥೆಯನ್ನು ಕೇಂದ್ರವು ಮಾಡುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಕೇಂದ್ರದ ಪ್ರಕಟನೆಗಳನ್ನು ವಿವಿಧ ಕಾಲೇಜುಗಳಿಗೆ, ಪುಸ್ತಕ ಭಂಡಾರಗಳಿಗೆ, ಸಾಹಿತ್ಯ ಸಮ್ಮೇಳನಗಳಿಗೆ ಕೊಂಡೊಯ್ದು ಮಾರಾಟ ಮಾಡಲಾಗಿದೆ. ಅಲ್ಲದೆ ಕೇಂದ್ರದ ಪ್ರಕಟನೆಯಾದ ಯಕ್ಷಸ್ತ್ರೀ ಕೃತಿಯ 300 (ರೂ. 45,600/– ಮೊತ್ತದ) ಪ್ರತಿಗಳನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಇವರು ಖರೀದಿಸಿದ್ದಾರೆ.

39. ಗಾಂಧಿ ಅಧ್ಯಯನ ಕೇಂದ್ರ : –

ನಿರ್ದೇಶಕರು: ಪ್ರೊ. ಪಿ.ಎಲ್. ಧರ್ಮ

40. ಕನಕದಾಸ ಸಂಶೋಧನ ಕೇಂದ್ರ

ಸಂಯೋಜಕರು : ಪ್ರೊ. ಬಿ. ಶಿವರಾಮ ಶೆಟ್ಟಿ

ಪೀಠಿಕೆ:

ಕನಕದಾಸರ ಚಿಂತನೆಗಳು ಈ ಕಾಲಕ್ಕೂ ಸಂಗತವಾದ ಕಾರಣದಿಂದ ಕನಕದಾಸರ ಬದುಕು ಮತ್ತು ಬರೆಹ ಹಾಗೂ ತತ್ವ ಚಿಂತನೆಗಳ ಅಧ್ಯಯನ ಮತ್ತು ಪ್ರಸರಣದ ಉದ್ದೇಶದಲ್ಲಿ ಕರ್ನಾಟಕ ಸರಕಾರ 2003ರಲ್ಲಿ ಕನಕದಾಸ ಅಧ್ಯಯನ ಪೀಠ ಹಾಗೂ 2008ರಲ್ಲಿ ಕನಕದಾಸ ಸಂಶೋಧನ ಕೇಂದ್ರವನ್ನು ಸ್ಥಾಪಿಸಿದೆ.

ಕನಕದಾಸರ ಕುರಿತ ಪುಸ್ತಕ ಪ್ರಕಟಣೆ ಹಾಗೂ ಕನಕ ಮತ್ತು ಭಕ್ತಿ ಚಳುವಳಿಗೆ ಸಂಬಂಧಪಟ್ಟಂತೆ ವಿಚಾರ ಸಂಕಿರಣ, ಸಮ್ಮೇಳನ ಹಾಗೂ ಕಮ್ಮಟಗಳನ್ನು ಏರ್ಪಡಿಸುತ್ತಿದೆ. ಕನಕದಾಸ ಅಧ್ಯಯನ ಪೀಠ ಮತ್ತು ಕನಕದಾಸ ಸಂಶೋಧನ ಕೇಂದ್ರ ಈಗಾಗಲೇ 'ಕನಕ ಸಾಹಿತ್ಯ: ಸಾಂಸ್ಕೃತಿ ಮರು ಓದು' ಮತ್ತು 'ಕನಕನ ಸುತ್ತಮುತ್ತ: ಸಂಕಥನಗಳ ಜಿಜ್ಞಾಸೆ' ಎಂಬ ವಿಷಯದ ಕುರಿತು ರಾಷ್ಟ್ರೀಯ ಹಾಗೂ 'ಭಕ್ತಿ ಪರಿಕಲ್ಪನೆಯ ಮರುಚಿಂತನೆ' ಎಂಬ ವಿಷಯದ ಕುರಿತು ಅಂತರರಾಷ್ಟ್ರೀಯ ವಿಚಾರ ಸಂಕಿರಣಗಳನ್ನು ನಡೆಸಿರುತ್ತದೆ. ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳಾದ ಮೈಸೂರು, ಧಾರವಾಡ, ಬೆಂಗಳೂರು, ಕುವೆಂಪು, ತುಮಕೂರು, ಬಿಜಾಪುರ, ದಾವಣಿಗೆರೆ ವಿಶ್ವವಿದ್ಯಾನಿಲಯಗಳಲ್ಲದೆ, ಹೊರರಾಜ್ಯಗಳ ಕಣ್ಣೂರು, ಚೆನ್ನೈ, ಮುಂಬೈ, ಕುಪ್ಪಂ, ಒಸ್ಮಾನಿಯ ಈ ವಿಶ್ವವಿದ್ಯಾನಿಲಯಗಳ ಸಹಯೋಗದೊಂದಿಗೆ ಅಲ್ಲಿಯ ಸಂಯೋಜಿತ ಕಾಲೇಜು, ಪದವಿ ಪೂರ್ವ ಕಾಲೇಜು ಹಾಗೂ ಇತರ ಸಾರ್ವಜನಿಕ ಸಂಘ ಸಂಸ್ಥೆಗಳ ಆಶ್ರಯದೊಂದಿಗೆ ಕನಕದಾಸರ ಕೃತಿ ಮತ್ತು ಅವರು ಪ್ರತಿಪಾದಿಸಿದ ಮೌಲ್ಯಗಳ ಕುರಿತಂತೆ ಈವರೆಗೆ ಒಟ್ಟು 126 ಪ್ರಚಾರೋಪನ್ಯಾಸಗಳನ್ನು ನೆರವೇರಿಸಿದೆ. ಕನಕದಾಸರ ಕೀರ್ತನೆಗಳ 'ಕನಕ ಕೀರ್ತನ' ಮತ್ತು 'ಕನಕ ಗಂಗೋತ್ರಿ' ಗಾಯನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳ ವಿದ್ಯಾರ್ಥಿ, ಅಧ್ಯಾಪಕ ಆಡಳಿತವರ್ಗ ಹಾಗೂ ಸಾರ್ವಜನಿಕ ವಲಯಗಳಲ್ಲಿ ಕನಕದಾಸರ ತತ್ತ್ವಚಿಂತನವನ್ನು ಪ್ರಸರಣಗೊಳಿಸುವ ಮತ್ತು ಸಾಮುದಾಯಿಕ ಪಾಲ್ಗೊಳ್ಳುವಿಕೆಯ ಆಶಯದಲ್ಲಿ ಎಲ್ಲಾ ಸಮುದಾಯಗಳಿಗೆ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಅವಕಾಶವನ್ನು ಕಲ್ಪಿಸುವ ಉದ್ದೇಶದಲ್ಲಿ ಈ ಕಾರ್ಯಕ್ರಮಗಳನ್ನು ನಿರಂತರವಾಗಿ ಏರ್ಪಡಿಸಲಾಗುತ್ತಿದೆ.

1.) ಆವರ್ತನ ಕಾರ್ಯಕ್ರಮಗಳು

1.1) <u>ಕನಕ ತತ್ತ್ವ ಚಿಂತನ</u> : ಪ್ರಚಾರೋಪನ್ಯಾಸ ಕಾರ್ಯಕ್ರಮ

<u>ಅಕ್ಟೋಬರ್–ಮಾರ್ಚ್, 2014–15</u>

'ಬಾಗಿಲನು ತೆರೆದು...' ದೇಗುಲ ಪ್ರವೇಶ –ಸಮಕಾಲೀನ ಸಂವಾದ

2014ರ ಅಕ್ಟೋಬರ್–2015ರ ಮಾರ್ಚ್ ತಿಂಗಳುಗಳ ಅವದಿಯಲ್ಲಿ ನಡೆಸಲಾದ ಈ ಪ್ರಚಾರೋಪನ್ಯಾಸ ಕಾರ್ಯಕ್ರಮಗಳಲ್ಲಿ **"ಬಾಗಿಲನು ತೆರೆದು... ದೇಗುಲ ಪ್ರವೇಶ –ಸಮಕಾಲೀನ ಸಂವಾದ"** ಎಂಬ ವಿಷಯದ ಕುರಿತು ಒಟ್ಟು **24** ಉಪನ್ಯಾಸಗಳನ್ನು ಏರ್ಪಡಿಸಲಾಯಿತು.

ಪ್ರಚಾರೋಪನ್ಯಾಸದ ವಿವರಗಳು:–

1. ದಿನಾಂಕ 10.10.2014, ಕನ್ನಡ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗ, ಸರಕಾರಿ ಕಲಾ ಕಾಲೇಜು, ಚಿತ್ರದುರ್ಗ, ಡಾ. ಬಂಜಗೆರೆ ಜಯಪ್ರಕಾಶ್ ಇವರು ಉದ್ಘಾಟಿಸಿದರು. ಕನ್ನಡ ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಶೋಧನ ಕೇಂದ್ರ, ತೀರ್ಥಹಳ್ಳಿ, ಇಲ್ಲಿಯ ಪ್ರಾಧ್ಯಾಪಕರಾದ ಡಾ.ಕೆ.ಸಿ. ಶಿವಾರೆಡ್ಡಿ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಹೆಚ್. ಲಿಂಗಪ್ಪ ಇವರು ವಹಿಸಿದ್ದರು.

2. ದಿನಾಂಕ 10.10.2014ರಂದು ವಾಣಿ ಸಕ್ಕರೆ ಸರಕಾರಿ ಪ್ರಥಮ ದರ್ಜೆ ಕಾಲೇಜು, ಹಿರಿಯೂರು, ಚಿತ್ರದುರ್ಗ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ, ಕನ್ನಡ ವಿ.ವಿ., ಹಂಪಿ ಇಲ್ಲಿನ ಪ್ರಾಧ್ಯಾಪಕರಾದ ಡಾ. ಮಾಧವ ಪೆರಾಜೆ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ಸಿ. ಶಿವಲಿಂಗಪ್ಪ ಇವರು ವಹಿಸಿದ್ದರು.

3. ದಿನಾಂಕ 11.10.2014ರಂದು ಸರಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರ, ದಾವಣಗೆರೆ ಭಾಷಾಶಾಸ್ತ್ರ ವಿಭಾಗ, ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಶಿವಮೊಗ್ಗ ಇಲ್ಲಿನ ಮುಖ್ಯಸ್ಥರಾದ ಡಾ. ಮೇಟಿ ಮಲ್ಲಿಕಾರ್ಜುನ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ಜಿ. ಮಲ್ಲಿಕಾರ್ಜುನಪ್ಪ ಇವರು ವಹಿಸಿದ್ದರು.

4. ದಿನಾಂಕ 11.10.2014ರಂದು ಪತ್ರಕರ್ತರ ಭವನ, ಚಿತ್ರದುರ್ಗ ಕೋಲಾರ ಜಿಲ್ಲೆಯ ಅದಿಮ, ಸಂಸ್ಕೃತಿ ಚಿಂತಕರಾದ ಕೋಟಗಾನಹಳ್ಳಿ ರಾಮಯ್ಯ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಿತ್ರದುರ್ಗದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಆರ್. ಮಲ್ಲಿಕಾರ್ಜುನಯ್ಯ ಇವರು ವಹಿಸಿದ್ದರು.

5. ದಿನಾಂಕ 13.10.2014ರಂದು ಸರಕಾರಿ ಪ್ರಥಮ ದರ್ಜೆ ಕಾಲೇಜು, ಕೃಷ್ಣರಾಜಪುರಂ, ಬೆಂಗಳೂರು – ಬೆಂಗಳೂರಿನ ನ್ಯಾಶನಲ್ ಪದವಿ ಕಾಲೇಜಿನ ಪ್ರಾಧ್ಯಾಪಕರಾದ ಡಾ. ರಂಗನಾಥ ಕಂಟನಕುಂಟೆ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ವಿ. ಧನಮ್ಮ ಇವರು ವಹಿಸಿದ್ದರು.

6. ದಿನಾಂಕ 17.10.2014ರಂದು ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹಾಸನ –ಸರಕಾರಿ ಗೃಹ ವಿಜ್ಞಾನ ಕಾಲೇಜಿನ ಪ್ರಾಧ್ಯಾಪಕರಾದ ಭಾರತಿ ದೇವಿ ಪಿ., ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಹೆಚ್. ಎನ್. ರೂಪರಾಜ್ ಚಂದನ್ ಇವರು ವಹಿಸಿದ್ದರು.

7. ದಿನಾಂಕ 17.10.2014ರಂದು ಸರಕಾರಿ ಕಲಾ ಕಾಲೇಜು, ಹಾಸನ –ಲೇಖಕಿ ಮತ್ತು ವಕೀಲರಾದ ಬಾನು ಮುಷ್ತಕ್ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ಐ. ಎಂ. ಮೋಹನ್ ಇವರು ವಹಿಸಿದ್ದರು.

8. ದಿನಾಂಕ 10.11.2014ರಂದು ಮಂಗಳಗಂಗೋತ್ರಿಯ ಮಂಗಳ ಸಭಾಂಗಣ– ಮೈಸೂರಿನ ಕವಿಗಳು, ಸಂಸ್ಕೃತಿ ಚಿಂತಕರಾದ ಪ್ರೊ. ಹೆಚ್. ಗೋವಿಂದಯ್ಯ ಇವರು ನೆರೆವೇರಿಸಿ, ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳಾದ ಪ್ರೊ. ಕೆ. ಭೈರಪ್ಪ ಇವರು ವಹಿಸಿದ್ದರು.

9. ದಿನಾಂಕ 10.11.2014ರಂದು ಮಂಗಳಗಂಗೋತ್ರಿಯ ಮಂಗಳ ಸಭಾಂಗಣ – ವಿಧಾನ ಪರಿಷತ್ ಸದಸ್ಯರಾದ ಡಾ. ಜಯಮಾಲ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳಾದ ಪ್ರೊ. ಕೆ. ಭೈರಪ್ಪ ಇವರು ವಹಿಸಿದ್ದರು.

10. ದಿನಾಂಕ 10.11.2014ರಂದು ಮಂಗಳಗಂಗೋತ್ರಿಯ ಮಂಗಳ ಸಭಾಂಗಣ – ಕ್ರೈಸ್ಟ್ ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದ ಪ್ರಾಧ್ಯಾಪಕರಾದ ಡಾ. ಎಸ್. ಪಿ. ವಾಗೀಶ್ವರಿ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳಾದ ಪ್ರೊ. ಕೆ. ಭೈರಪ್ಪ ಇವರು ವಹಿಸಿದ್ದರು.

11. ದಿನಾಂಕ 08.12.2014ರಂದು ಶ್ರೀ ಮಹಾವೀರ ಕಾಲೇಜು, ಮೂಡಬಿದಿರೆ – ಇತಿಹಾಸ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಉದಯ ಬಾರ್ಕೂರು ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಹೆಚ್. ಚಂದ್ರಶೇಖರ್ ದೀಕ್ಷಿತ್ ಇವರು ವಹಿಸಿದ್ದರು.

12. ದಿನಾಂಕ 12.12.2014ರಂದು ರಾಮಕೃಷ್ಣ ಕಾಲೇಜು, ಬಂಟ್ಸ್ ಹಾಸ್ಟೆಲ್, ಮಂಗಳೂರು –ಡಾ. ಕೆ. ಶಿವರಾಮ ಕಾರಂತ ಸರಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ಳಾರೆ ಇಲ್ಲಿಯ ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ

ಐವನ್ ಪ್ರಾನ್ಸಿಸ್ ಲೋಬೋ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಡಾ. ನವೀನ್ ಶೆಟ್ಟಿ ಕೆ. ಇವರು ವಹಿಸಿದ್ದರು.

13. ದಿನಾಂಕ 16.12.2014ರಂದು ಡಾ. ಕೆ. ಶಿವರಾಮ ಕಾರಂತ ಸರಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ಳಾರೆ –ಸಂತ ಅಲೋಶಿಯಸ್ ಸಂಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಡಾ. ಮಹಾಲಿಂಗ ಭಟ್ ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬೆಳ್ಳಾರೆ ಡಾ. ಕೆ. ಶಿವರಾಮ ಕಾರಂತ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ರಾಜಶೇಖರ್ ಹೆಬ್ಬಾರ್ ಇವರು ವಹಿಸಿದ್ದರು.

14. ದಿನಾಂಕ 16.12.2014ರಂದು ಶ್ರೀರಾಮ ಪ್ರಥಮ ದರ್ಜೆ ಕಾಲೇಜು, ಕಲ್ಲಡ್ಕ ಇಲ್ಲಿ ನಡೆದ – ಮಂಗಳೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಪಿ.ಎಲ್. ಧರ್ಮ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಸಂಸ್ಥಾಪಕರಾದ ಪ್ರಭಾಕರ್ ಭಟ್ ಇವರು ವಹಿಸಿದ್ದರು.

15. ದಿನಾಂಕ 06.01.2015ರಂದು ಶ್ರೀ ನಿರಂಜನ ಸ್ವಾಮಿ ಪ್ರಥಮ ದರ್ಜೆ ಕಾಲೇಜು, ಸುಂಕದಕಟ್ಟೆ, ಬಜ್ಪೆ – ಸರಕಾರಿ ಪದವಿ ಪೂರ್ವ ಕಾಲೇಜು, ಬೊಕ್ಕಪಟ್ಟಣ ಇಲ್ಲಿಯ ಕನ್ನಡ ಪ್ರಾಧ್ಯಾಪಕರಾದ ಡಾ. ವಾಸುದೇವ ಬೆಳ್ಳಿ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಲತಾ ಕುಮಾರಿ ಇವರು ವಹಿಸಿದ್ದರು.

16. ದಿನಾಂಕ 08.01.2015ರಂದು ಲಕ್ಷ್ಮೀ ಸೋಮ ಬಂಗೇರ ಸರಕಾರಿ ಪದವಿ ಕಾಲೇಜು, ಕೋಟ, ಪಡುಕೆರೆ – ಸರಕಾರಿ ಪದವಿ ಪೂರ್ವ ಕಾಲೇಜಿನ ಇತಿಹಾಸ ಉಪನ್ಯಾಸಕರಾದ ಶ್ರೀ ಪ್ರದೀಪ್ ಕುಮಾರ್ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ರಾಜೇಂದ್ರ ನಾಯಕ್ ಇವರು ವಹಿಸಿದ್ದರು.

17. ದಿನಾಂಕ 08.01.2015ರಂದು ಸರಕಾರಿ ಪ್ರಥಮ ದರ್ಜೆ ಕಾಲೇಜು, ಬೈಂದೂರು – ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಶಿವಮೊಗ್ಗ ಇಲ್ಲಿಯ ಕನ್ನಡ ವಿಭಾಗದ ಡಾ. ಪ್ರಕಾಶ್ ಮರ್ಗನಳ್ಳಿ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಬಸವರಾಜ್ ಮೇಲಿ ಇವರು ವಹಿಸಿದ್ದರು.

18. ದಿನಾಂಕ 10.01.2015ರಂದು ಕರ್ನಾಟಕ ಸಂಘ, ಮಾಟುಂಗ, ಮುಂಬೈ – ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ಇಂಗ್ಲೀಷ್ ವಿಭಾಗದ ಪ್ರಾಧ್ಯಾಪಕರಾದ ಡಾ. ರಾಜಲಕ್ಷ್ಮೀ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಸಂಘದ ಉಪಾಧ್ಯಕ್ಷರಾದ ಶ್ರೀನಿವಾಸ ಜೋಕಟ್ಟೆ ಇವರು ವಹಿಸಿದ್ದರು.

19. ದಿನಾಂಕ 31.01.2015ರಂದು ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ ಇಲ್ಲಿ ನಡೆದ **ಕನಕ ಚಿಂತನ** ಪ್ರಚಾರೋಪನ್ಯಾಸ ಕಾರ್ಯಕ್ರಮದಲ್ಲಿ **''ಬಾಗಿಲನು ತೆರೆದು_ ದೇಗುಲ ಪ್ರವೇಶ –ಸಮಕಾಲೀನ ಸಂವಾದ''** ಎಂಬ ವಿಷಯದ ಕುರಿತು ಕರ್ನಾಟಕ ಸಾಹಿತ್ಯ ಅಕಾಡೆಮಿ ಇಲ್ಲಿಯ ಸದಸ್ಯರು ಮತ್ತು ಚಿಂತಕರಾದ ಡಾ. ವಡ್ಡಗೆರೆ ನಾಗರಾಜಯ್ಯ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಹೆಚ್. ಜಯದೇವಪ್ಪ ಇವರು ವಹಿಸಿದ್ದರು.

20. ದಿನಾಂಕ 31.01.2015ರಂದು ಸರ್. ಎಂ.ವಿ. ಸರಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಭದ್ರಾವತಿ – ಕುವೆಂಪು ವಿಶ್ವವಿದ್ಯಾನಿಲಯದ ಇಂಗ್ಲೀಷ್ ಪ್ರಾಧ್ಯಾಪಕರಾದ ಪ್ರೊ. ರಾಜೇಂದ್ರ ಚೆನ್ನಿ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಮೋಹನ್ ಕುಮಾರ್ ಇವರು ವಹಿಸಿದ್ದರು.

21. ದಿನಾಂಕ 25.02.2015ರಂದು ಕನ್ನಡ ಅಧ್ಯಯನ ಸಂಸ್ಥೆ, ಮಹಿಳಾ ವಿಶ್ವವಿದ್ಯಾನಿಲಯ, ಬಿಜಾಪುರ –ಸಿಕಾಬ್ ಮಹಿಳಾ ಪದವಿ ಕಾಲೇಜು, ಬಿಜಾಪುರ ಇಲ್ಲಿಯ ಕನ್ನಡ ಪ್ರಾಧ್ಯಾಪಕರಾದ ಡಾ. ಮಲ್ಲಿಕಾರ್ಜುನ ಮೇತ್ರಿ ಇವರು

ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥರಾದ ಪ್ರೊ. ಚಿಂತಾಮಣಿ ಇವರು ವಹಿಸಿದ್ದರು.

22. ದಿನಾಂಕ 25.02.2015ರಂದು ಸರಕಾರಿ ಪದವಿ ಕಾಲೇಜು, ಬಿಜಾಪುರ – ಬಿಜಾಪುರ ವಿಶ್ವವಿದ್ಯಾನಿಲಯದ ಮಹಿಳಾ ಅಧ್ಯಯನ ಕೇಂದ್ರದ ನಿರ್ದೇಶಕರಾದ ಪ್ರೊ. ಸುನಂದಮ್ಮ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಜಿ.ಎನ್. ಕುಲಕರ್ಣಿ ಇವರು ವಹಿಸಿದ್ದರು.

23. ದಿನಾಂಕ 30.03.2015ರಂದು ನ್ಯೂ ಸೆಮಿನಾರ್ ಹಾಲ್, ಒಸ್ಮಾನಿಯ ವಿಶ್ವವಿದ್ಯಾನಿಲಯ, ಹೈದರಬಾದ್ – ಖ್ಯಾತ ಚಿಂತಕರಾದ ಪ್ರೊ. ಕೆ.ವಿ. ತಿರುಮಲೇಶ್ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಪ್ರೊ. ಲಿಂಗಪ್ಪ ಗೋನಾಲ್ ಇವರು ವಹಿಸಿದ್ದರು.

24. ದಿನಾಂಕ 31.03.2015 ರಂದು ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿ ಮಹಿಳಾ ವಿದ್ಯಾಲಯ, ಬೆಂಗಳೂರು – ಮಹಾರಾಣಿ ವಿಜ್ಞಾನ ಕಾಲೇಜು, ಬೆಂಗಳೂರು ಇಲ್ಲಿಯ ಪ್ರಾಧ್ಯಾಪಕರಾದ ಖ್ಯಾತ ಸಂಸ್ಕೃತಿ ಚಿಂತಕಿ ಡಾ. ಎಂ.ಎಸ್. ಆಶಾದೇವಿ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಸರಸ್ವತಮ್ಮ ಇವರು ವಹಿಸಿದ್ದರು.

ಕನಕದಾಸರು ಪ್ರತಿಪಾದಿಸಿದ ಮೌಲ್ಯ ಮತ್ತು ಅವರ ತತ್ತ್ವಚಿಂತನೆಗಳನ್ನು ವಿದ್ಯಾರ್ಥಿ ಸಮುದಾಯಗಳಿಗೆ ಪಸರಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಪ್ರಚಾರೋಪನ್ಯಾಸ ಕಾರ್ಯಕ್ರಮಗಳಿಗೆ ಉತ್ತಮ ಸಾರ್ವಜನಿಕ ಅಭಿಪ್ರಾಯ ವ್ಯಕ್ತವಾಗಿದ್ದು ವಿವಿಧ ಕಾಲೇಜುಗಳ ವಿದ್ಯಾರ್ಥಿಗಳೂ ಸೇರಿದಂತೆ ಅಧ್ಯಾಪಕರು ಮತ್ತು ಆಡಳಿತ ವರ್ಗದವರು ಈ ಕಾರ್ಯಕ್ರಮದ ಸಂಪೂರ್ಣ ಪ್ರಯೋಜನ ಪಡೆದರು.

1.2) <u>ಕನಕ ಕೀರ್ತನ:</u> 03 ಜನವರಿ, 2015

ಪ್ರೌಢ ಶಾಲೆ, ಪದವಿ ಪೂರ್ವ, ಪದವಿ ಕಾಲೇಜು ಹಾಗೂ ಸಾರ್ವಜನಿಕ ಮಟ್ಟದ ಕೀರ್ತನ ಗಾಯನ ಕಾರ್ಯಕ್ರಮ

'ಸಾಮುದಾಯಿಕ ಪಾಲ್ಗೊಳ್ಳುವಿಕೆ'ಯ ಆಶಯದ ಹಿನ್ನೆಲೆಯಲ್ಲಿ ಕನಕದಾಸರ ಕೀರ್ತನ ಗಾಯನ ಕಾರ್ಯಕ್ರಮವನ್ನು ರಾಷ್ಟ್ರೀಯ ಸೇವಾ ಯೋಜನೆ ಮಂಗಳೂರು ವಿಶ್ವವಿದ್ಯಾನಿಲಯ, ಕನ್ನಡ ಸಂಘ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರ ಸಹಯೋಗದೊಂದಿಗೆ ದಿನಾಂಕ 03.01.2015ರಂದು ಮಂಗಳೂರಿನ ವಿಶ್ವವಿದ್ಯಾನಿಲಯ ಕಾಲೇಜಿನ 'ರವೀಂದ್ರ ಕಲಾ' ಭವನದಲ್ಲಿ ನೆರವೇರಿಸಲಾಯಿತು.

ಕವಿ, ಗೀತೆ ರಚನೆಕಾರ ಡಾ. ಜಯಂತ್ ಕಾಯ್ಕಿಣಿ ಅವರು ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಪ್ರೊ. ಪಿ.ಎಸ್. ಯಡಪಡಿತ್ತಾಯ ಅವರು ವಹಿಸಿದ್ದರು.

ಮಂಗಳೂರು ತಾಲೂಕು ವ್ಯಾಪ್ತಿಯ ಪ್ರೌಢ ಶಾಲೆ, ಪದವಿ ಪೂರ್ವ, ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳ ವಿದ್ಯಾರ್ಥಿ, ಅಧ್ಯಾಪಕ ಮತ್ತು ಆಡಳಿತವರ್ಗದವರು ಅಲ್ಲದೆಯೇ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಸಾರ್ವಜನಿಕರು ಪಾಲ್ಗೊಂಡ ಈ ಕಾರ್ಯಕ್ರಮದಲ್ಲಿ, ಪ್ರೌಢ ಶಾಲೆಗಳಿಂದ 6 ವಿದ್ಯಾರ್ಥಿಗಳು, ಪದವಿಪೂರ್ವ ಕಾಲೇಜುಗಳಿಂದ 11 ವಿದ್ಯಾರ್ಥಿಗಳು, ಪದವಿ ಕಾಲೇಜುಗಳಿಂದ 15 ವಿದ್ಯಾರ್ಥಿಗಳು, ಅಧ್ಯಾಪಕ, ಅಧ್ಯಾಪಕೇತರ ವಿಭಾಗದಿಂದ 2 ಅಭ್ಯರ್ಥಿಗಳು ಹಾಗೂ ಸಾರ್ವಜನಿಕ ವಲಯದಿಂದ 17 ಮಂದಿ ಒಟ್ಟು 51 ಮಂದಿ ಅಭ್ಯರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಪದವಿ ಪೂರ್ವ, ಪದವಿ ಕಾಲೇಜು ಹಾಗೂ ಸಾರ್ವಜನಿಕ ವಲಯದಲ್ಲಿ ನಡೆಸುತ್ತಿದ್ದ ಈ ಕಾರ್ಯಕ್ರಮವನ್ನು ಈ ಬಾರಿ ಮಂಗಳೂರು ತಾಲೂಕು ವ್ಯಾಪ್ತಿಯ ಪ್ರೌಢ ಶಾಲೆಗೂ ವಿಸ್ತರಿಸಲಾಯಿತು.

‘ಕನಕ ಸ್ಮೃತಿ’ ಕಾರ್ಯಕ್ರಮಕ್ಕೆ ಆಯ್ಕೆಯಾದ ಅಭ್ಯರ್ಥಿಗಳು:–

ಪ್ರೌಢ ಶಾಲೆ ವಿಭಾಗದಿಂದ

1). ನಿರೀಕ್ಷಾ ಯು.ಕೆ, 9ನೇ ತರಗತಿ, ಬೆಸೆಂಟ್ ಆಂಗ್ಲ ಮಾಧ್ಯಮ ಶಾಲೆ, ಕೊಡಿಯಾಲ್ ಬೈಲ್, ಮಂಗಳೂರು
2). ವಿಜೇತ್ ಉಳ್ಳಾಲ್, 9ನೇ ತರಗತಿ, ಸೆಂಟ್ ಅಲೋಶಿಯಸ್ ಪ್ರೌಢ ಶಾಲೆ, ಕೊಡಿಯಾಲ್ ಬೈಲ್, ಮಂಗಳೂರು
3). ಗ್ರೀಷ್ಮ ಕಣಿ ಎನ್., 9ನೇ ತರಗತಿ, ಚಿನ್ಮಯ ಆಂಗ್ಲ ಮಾಧ್ಯಮ ಶಾಲೆ, ಬಂಟ್ಸ್ ಹಾಸ್ಟೇಲ್, ಮಂಗಳೂರು

ಪದವಿಪೂರ್ವ ವಿಭಾಗದಿಂದ

1). ಮಾನಸ ಹೆಗ್ಡೆ, ದ್ವಿತೀಯ ವಾಣಿಜ್ಯ ವಿಭಾಗ, ಕೆನರಾ ಪದವಿ ಪೂರ್ವ ಕಾಲೇಜು, ಮಂಗಳೂರು
2). ಚಿನ್ಮಯಿ ವಿ. ಭಟ್, ಪ್ರಥಮ ವಿಜ್ಞಾನ ವಿಭಾಗ, ಡಾ. ಎನ್. ಎಸ್. ಎ. ಎಂ. ಪದವಿಪೂರ್ವ ಕಾಲೇಜು, ನಂತೂರು, ಮಂಗಳೂರು
3). ನಿರೀಕ್ಷಾ ಭಟ್. ಆರ್, ದ್ವಿತೀಯ ವಿಜ್ಞಾನ ವಿಭಾಗ, ಯೆನೆಪೋಯ ಪದವಿ ಪೂರ್ವಕಾಲೇಜು, ಮಂಗಳೂರು.
4). ಸುಹೃತ್ ಡಿ, ದ್ವಿತೀಯ ವಿಜ್ಞಾನ ವಿಭಾಗ, ಶಾರದಾ ವಿದ್ಯಾಲಯ, ಮಂಗಳೂರು

ಪದವಿ ವಿಭಾಗದಿಂದ

1). ಗಾರ್ಗಿ ಎನ್. ಶಬರಾಯ್, ತೃತೀಯ ಬಿ.ಎಸ್ಸಿ, ಪೂರ್ಣಪ್ರಜ್ಞ ಕಾಲೇಜು, ಉಡುಪಿ
2). ರೂಪಶ್ರೀ, ತೃತೀಯ ಬಿ.ಎಸ್ಸಿ, ವಿವೇಕಾನಂದ ಕಾಲೇಜು, ಪುತ್ತೂರು,
3). ಸತ್ಯಪ್ರಜ್ಞ, ಪ್ರಥಮ ಬಿ.ಕಾಂ, ಶ್ರೀದುರ್ಗಾಪರಮೆಶ್ವರಿ ದೇವಳ ಪ್ರಥಮ ದರ್ಜೆ ಕಾಲೇಜು, ಕಟೀಲು

ಅಧ್ಯಾಪಕ/ಅಧ್ಯಾಪಕೇತರ ವಿಭಾಗದಿಂದ

1. ಪ್ರತೀಕ್ಷಾ, ಉಪನ್ಯಾಸಕರು, ಮಹೇಶ್ ಪದವಿ ಪೂರ್ವ ಕಾಲೇಜು, ಮಂಗಳೂರು,
2). ರೇಷ್ಮಾ ಭಟ್, ಉಪನ್ಯಾಸಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಉಪ್ಪಿನಂಗಡಿ

ಸಾರ್ವಜನಿಕ ವಿಭಾಗದಿಂದ

1). ಮಂಜುನಾಥ್.ಎನ್, ಕೊಂಬೆಟ್ಟು, ಪುತ್ತೂರು
2). ಅರುಣಾ ರಾವ್, ಕಟೀಲು
3). ನಿತಿನ್, ಮುಲ್ಕಿ

1.3) ಕನಕ ಗಂಗೋತ್ರಿ: 17 ಜನವರಿ, 2015
ಸ್ನಾತಕೋತ್ತರ ವಿದ್ಯಾರ್ಥಿ, ಅಧ್ಯಾಪಕ ಮತ್ತು ಆಡಳಿತ ವರ್ಗ ಮಟ್ಟದ ಕೀರ್ತನ ಗಾಯನ ಕಾರ್ಯಕ್ರಮ

ವಿಶ್ವವಿದ್ಯಾನಿಲ0ಯದ ಆವರಣದಲ್ಲಿ ವಿವಿಧ ವಿಭಾಗಗಳ ವಿದ್ಯಾರ್ಥಿ, ಅಧ್ಯಾಪಕ ಹಾಗೂ ಆಡಳಿತವರ್ಗದವರು ಸಾಮುದಾಯಿಕವಾಗಿ ಪಾಲ್ಗೊಳ್ಳುವ ಆಶ0ಯದಲ್ಲಿ ‘ಕನಕ ಗಂಗೋತ್ರಿ’ ಕೀರ್ತನ ಗಾ0ಯನ ಕಾ0ರ್ಯಕ್ರಮವನ್ನು ದಿನಾಂಕ 17.01.2015ರಂದು ಪೂರ್ವಾಹ್ನ 11.00ಗಂಟೆಗೆ ಮಂಗಳಗಂಗೋತ್ರಿ0ಯ ‘ಹಳೆಸೆನೆಟ್ ಸಭಾಂಗಣದ’ಲ್ಲಿ ಹಮ್ಮಿಕೊಳ್ಳಲಾಯಿತು.

ಈ ಕಾ0ರ್ಯಕ್ರಮವನ್ನು ಉತ್ತರ ಕನ್ನಡ ಜಿಲ್ಲೆಯ ರಂಗ ನಿರ್ದೇಶಕರಾದ ಶ್ರೀಪಾದ ಭಟ್ ಇವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸಮಾಜ ಶಾಸ್ತ್ರ ವಿಭಾಗದ ಅಧ್ಯಕ್ಷರಾದ ಪ್ರೊ. ಜೋಗನ್ ಶಂಕರ್ ಇವರು ಪಾಲ್ಗೊಂಡಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಪ್ರೊ. ಪಿ. ಎಸ್. ಯಡಪಡಿತ್ತಾಯ ಇವರು ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಕನಕದಾಸರ ಕೀರ್ತನೆಗಳ ‘ಕನಕ ಕೀರ್ತನ ಕುಂಚ ವಿನ್ಯಾಸ’ ಕಾರ್ಯಕ್ರಮವನ್ನು ವಿಶ್ವನಾಥ್ ಹಿರೇಮತ್, ಶ್ರವಣ್ ಕುಲಕರ್ಣಿ, ಸತೀಶ್ ಯಲ್ಲಾಪುರ ಇವರು ನಡೆಸಿಕೊಟ್ಟರು.

ಈ ಕಾರ್ಯಕ್ರಮದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ, ಕಣ್ಣೂರು ವಿಶ್ವವಿದ್ಯಾನಿಲಯ ಹಾಗೂ ದಕ್ಷಿಣ ಕನ್ನಡ, ಉಡುಪಿ, ಕೊಡಗು ಜಿಲ್ಲಾ ವ್ಯಾಪ್ತಿಯ ರಾಜೀವ್ ಗಾಂಧಿ ವೈದ್ಯಕೀಯ ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ಶಿಕ್ಷಣ ವಿಶ್ವವಿದ್ಯಾನಿಲಯಗಳ

ಸ್ನಾತಕೋತ್ತರ ವಿಭಾಗಗಳ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಆಡಳಿತ ವರ್ಗದ ಸಿಬ್ಬ0ದಿಗಳು ಸೇರಿ ಒಟ್ಟು 24 ಮಂದಿ ಅಭ್ಯರ್ಥಿಗಳು ಭಾಗವಹಿಸಿದ್ದರು.

<u>'ಕನಕ ಸ್ಮೃತಿ' ಕಾ0ರ್ಯಕ್ರಮಕ್ಕೆ ಆ0ಯ್ಕೆಯಾದ ಅಭ್ಯರ್ಥಿಗಳು:–</u>

<u>ವಿದ್ಯಾರ್ಥಿ ವಿಭಾಗದಿಂದ:</u>

1) ಅದಿತಿ ಕೆ.ಟಿ., ದ್ವಿತೀಯ ಎಂ.ಎಸ್ಸಿ, ಭೌತಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ
2) ಸ್ವಾತಿ ಎಸ್.ರಾವ್., ಪ್ರಥಮ ಎಂ.ಎಸ್ಸಿ., ರಸಾಯನ ಶಾಸ್ತ್ರ ವಿಭಾಗ, ಎಸ್.ಡಿ.ಎಂ ಕಾಲೇಜು, ಉಜಿರೆ
3) ಶ್ರೀದೇವಿ, ದ್ವಿತೀಯ ಕನ್ನಡ ವಿಭಾಗ, ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ

<u>ಅಧ್ಯಾಪಕ/ಅಧ್ಯಾಪಕೇತರ ವರ್ಗದ ವಿಭಾಗದಿಂದ:</u>

1) ಹೇಮಶ್ರೀ ಕೆ., ಸಂಶೋಧಕರು, ರಸಾಯನ ಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ
2) ಸವಿತಾ, ಗ್ರಂಥಾಲಯ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ
3) ಬೇಬಿ, ಅನ್ವಯಿಕ ಪ್ರಾಣಿ ಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ

1.4) <u>ಕನಕ ಸ್ಮೃತಿ</u> : 07 ಎಪ್ರಿಲ್, 2015
ವಿಶೇಷ ಉಪನ್ಯಾಸ ಕಾ0ರ್ಯಕ್ರಮ

ಕನಕದಾಸ ಸಂಶೋಧನ ಕೇಂದ್ರದ ವತಿಯಿಂದ 2015, ಎಪ್ರಿಲ್ 07ರಂದು ಮಂಗಳೂರು ವಿಶ್ವವಿದ್ಯಾನಿಲ0ಯದ ಮಂಗಳಗಂಗೋತ್ರಿ0ಯ 'ಮಂಗಳ ಸಭಾಂಗಣ'ದಲ್ಲಿ 'ಕನಕ ಸ್ಮೃತಿ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾ0ರ್ಯಕ್ರಮದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಇವರು **'ಪರ್ಯಾಯ ಸಂಸ್ಕೃತಿ ಚರಿತ್ರೆ–ಕನಕದಾಸ'** ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು. ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಕೆ. ಭೈರಪ್ಪ ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡರು.

ಈ ಸಂದರ್ಭದಲ್ಲಿ ಕನಕದಾಸ ಸಂಶೋಧನ ಕೇಂದ್ರವು ಮಂಗಳೂರು ತಾಲೂಕು ವ್ಯಾಪ್ತಿಯ ಪ್ರೌಢ ಶಾಲೆ, ಪದವಿಪೂರ್ವ ಕಾಲೇಜು, ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳ ಅಧ್ಯಾಪಕ ಮತ್ತು ಅಧ್ಯಾಪಕೇತರ ಹಾಗೂ ದಕ್ಷಿಣ ಕನ್ನಡ, ಉಡುಪಿ ಜಿಲ್ಲಾ ವ್ಯಾಪ್ತಿಯ ಸಾರ್ವಜನಿಕ ಮಟ್ಟದಲ್ಲಿ ನಡೆಸಿದ 'ಕನಕ ಕೀರ್ತನ' ಗಾ0ಯನ ಕಾ0ರ್ಯಕ್ರಮದಲ್ಲಿ ಆ0ಯ್ಕೆಯಾದ 15 ಮಂದಿ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯ, ಕಣ್ಣೂರು ವಿಶ್ವವಿದ್ಯಾನಿಲಯ ಹಾಗೂ ದಕ್ಷಿಣ ಕನ್ನಡ, ಉಡುಪಿ ಕೊಡಗು ಜಿಲ್ಲಾ ವ್ಯಾಪ್ತಿಯ ವಿಶ್ವೇಶ್ವರಯ್ಯ ತಾಂತ್ರಿಕ ಶಿಕ್ಷಣ ಮತ್ತು ರಾಜೀವ್ ಗಾಂಧಿ ವೈದ್ಯಕೀಯ ಶಿಕ್ಷಣ ವಿಶ್ವವಿದ್ಯಾನಿಲಯಗಳ ಸ್ನಾತಕೋತ್ತರ ವಿಭಾಗಗಳ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಆಡಳಿತ ಸಿಬ್ಬಂದಿಗಳು ಪಾಲ್ಗೊಳ್ಳುವ ಉದ್ದೇಶದಿಂದ ಏರ್ಪಡಿಸಿದ 'ಕನಕ ಗಂಗೋತ್ರಿ' ಕೀರ್ತನ ಗಾ0ಯನ ಕಾ0ರ್ಯಕ್ರಮದಲ್ಲಿ ಆ0ಯ್ಕೆ0ಯಾದ 6 ಮಂದಿ ಒಟ್ಟು 21 ಅಭ್ಯರ್ಥಿಗಳಿಗೆ ತಲಾ 3000.00ದಂತೆ ಒಟ್ಟು ರೂ. 63,000.00 ಮೊತ್ತದ ನಗದು ಪುರಸ್ಕಾರ ನೀಡಲಾಯಿತು. ಜೊತೆಗೆ ಪ್ರಮಾಣ ಪತ್ರ ಮತ್ತು ಕನಕ ಸ್ಮರಣಿಕೆ0ಯನ್ನು ನೀಡಿ ಗೌರವಿಸಿ, ಅವರಿಂದ ಕನಕದಾಸರ ಕೀರ್ತನೆಗಳ ಗಾಯನ ಪ್ರಸ್ತುತಿ ಕಾ0ರ್ಯಕ್ರಮವನ್ನು ನೆರವೇರಿಸಲಾಯಿತು. ಇದೇ ಸಂದರ್ಭದಲ್ಲಿ 'ಕನಕ ಗಂಗೋತ್ರಿ' ಗಾಯನ ಕಾರ್ಯಕ್ರಮದಲ್ಲಿ ಭಾಗವಹಿಸಿದ ಒಟ್ಟು 18 ಅಭ್ಯರ್ಥಿಗಳಿಗೂ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು.

2. ಸ0ಶೋಧನ 0ಯೋಜನೆಗಳು

2.1) ದೀರ್ಘಕಾಲಿಕ ಸಂಶೋಧನ 0ಯೋಜನೆಗಳು
2.2) ಕಿರುಕಾಲಿಕ ಸಂಶೋಧನ 0ಯೋಜನೆಗಳು

2.1.) <u>ದೀರ್ಘಕಾಲಿಕ ಸಂಶೋಧನ ಯೋಜನೆ:</u>

2.1.1) ಕನಕದಾಸ ಅಧ್ಯಯನ: ಸಮಗ್ರ ಸಂಪುಟ ಭಾಗ –2, 3, 4, 5:

ಕನಕದಾಸ ಅಧ್ಯಯನ ಸಮಗ್ರ ಸಂಪುಟ– ಭಾಗ 2ರಲ್ಲಿ ಕನಕದಾಸರ ಕೃತಿ ವಿಮರ್ಶೆಗಳಿಗೆ ಸಂಬಂಧಿಸಿದಂತೆ 183 ಲೇಖನಗಳನ್ನು, ಕನಕದಾಸ ಅಧ್ಯಯನ ಸಮಗ್ರ ಸಂಪುಟ– ಭಾಗ 3ರಲ್ಲಿ ಕನಕದಾಸರ ಕೀರ್ತನೆಗಳ ವಿವೇಚನೆಗೆ ಸಂಬಂಧಿಸಿದಂತೆ 94 ಲೇಖನಗಳನ್ನು, ಕನಕದಾಸ ಅಧ್ಯಯನ ಸಮಗ್ರ ಸಂಪುಟ– ಭಾಗ 4ರಲ್ಲಿ ಕನಕದಾಸರು ಮತ್ತು ಸಮಕಾಲೀನ ಅನುಭಾವಿಗಳ ತೌಲನಿಕ ಅಧ್ಯಯನ ಮತ್ತು ಕನಕದಾಸರ ಕೃತಿಗಳ ಸಾಹಿತ್ಯಿಕ ಮೌಲ್ಯಗಳಿಗೆ ಸಂಬಂಧಿಸಿದಂತೆ ಒಟ್ಟು 68 ಲೇಖನಗಳನ್ನು, ಕನಕದಾಸ ಅಧ್ಯಯನ ಸಮಗ್ರ ಸಂಪುಟ– ಭಾಗ 5ರಲ್ಲಿ ಕನಕದಾಸರ ಸಾಹಿತ್ಯ ಕುರಿತ ಸಂಕೀರ್ಣ ಚರ್ಚೆಗೆ ಸಂಬಂಧಿಸಿದಂತೆ ಒಟ್ಟು 74 ಲೇಖನಗಳನ್ನು, ಹೀಗೆ ಒಟ್ಟು 419 ಲೇಖನಗಳನ್ನು ಸಂಪಾದಿಸಿ ಸಂಗ್ರಹಿಸಲಾಗಿದೆ. ಹೀಗೆ ಬಿಡಿಬಿಡಿಯಾಗಿರುವ ಲೇಖನಗಳನ್ನು ಕನಕದಾಸ ಅಧ್ಯಯನ ಸಮಗ್ರ ಸಂಪುಟ– ಭಾಗ 2, 3, 4, 5ರಲ್ಲಿ ಸಂಪಾದಿಸಿ ಬಿಡುಗಡೆಗೊಳಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದೆ.

2.1.2) ಕನಕದಾಸರ ನಾಟಕ: ಸಮಗ್ರ ಸಂಪುಟ

ಆಧುನಿಕೋತ್ತರ ಕಾಲದ ಪೂರ್ವಾರ್ಧದಿಂದ ಅಂದರೆ ಸುಮಾರು 1927ರಿಂದ ಈವರೆಗೂ ಪ್ರಕಟಗೊಂಡಿರುವ ಕನಕದಾಸರಿಗೆ ಸಂಬಂಧಿಸಿದ ನಾಟಕಗಳನ್ನು ಸಂಗ್ರಹಿಸಿ, ಸಂಪಾದಿಸುವ ಯೋಜನೆಯನ್ನು ಕೈಗೊಳ್ಳಲಾಗಿದೆ. ಕನಕದಾಸರಿಗೆ ಸಂಬಂಧಿಸಿದ ಒಟ್ಟು 10 ನಾಟಕ ಕೃತಿಗಳನ್ನು ಸಂಗ್ರಹಿಸಲಾಗಿದೆ.

2.1.3) ಕವಿತೆಗಳಲ್ಲಿ ಕನಕದಾಸರು

ಹದಿನಾರನೆಯ ಶತಮಾನದಲ್ಲಿ ಸಂತನಾಗಿ, ದಾರ್ಶನಿಕ ಕವಿಯಾಗಿ ಬದುಕಿ ಬಾಳಿದ ಕನಕದಾಸರ ಕುರಿತು ಈವರೆಗೆ ಪ್ರಕಟಗೊಂಡಿರುವ ಕವಿತೆಗಳನ್ನು ಸಂಗ್ರಹಿಸಿ, ಸಂಪಾದಿಸುವ ಯೋಜನೆಯನ್ನು ಕೈಗೊಳ್ಳಲಾಗಿದೆ. ಈ ವರೆಗೆ ಒಟ್ಟು 96 ಕವನಗಳನ್ನು ಸಂಗ್ರಹಿಸಲಾಗಿದೆ.

2.1.4) ಕನಕದಾಸ ಅಧ್ಯಯನ : ಸಮಗ್ರ ವರ್ಣನಾತ್ಮಕ ಸೂಚಿ ಭಾಗ –2

ಕನಕದಾಸರ ಕೃತಿಗಳಾದ ರಾಮಧಾನ್ಯ ಚರಿತೆ, ಮೋಹನ ತರಂಗಿಣಿ, ನಳಚರಿತ್ರೆ, ಹರಿಭಕ್ತಿಸಾರ ಕೃತಿಗಳಲ್ಲಿ ವ್ಯಕ್ತಗೊಂಡ ತಾತ್ವಿಕ ವಿಚಾರಗಳ ಕುರಿತ ಗ್ರಹಿಕೆಯ ನೆಲೆ, ಅಧ್ಯಯನದ ವಿಧಾನಕ್ರಮ ಮತ್ತು ಆ ಬಗ್ಗೆ ಲೇಖಕರ ನಿಲುವು ಈ ಕೆಲ ಅಂಶಗಳ ಹಿನ್ನೆಲೆಯಲ್ಲಿ ಕನಕದಾಸ ಅಧ್ಯಯನ: ಸಮಗ್ರ ವರ್ಣನಾತ್ಮಕ ಸೂಚಿ ಭಾಗ –2ರಲ್ಲಿ ಒಟ್ಟು 47 ಲೇಖನಗಳ ವರ್ಣನಾತ್ಮಕ ಸೂಚಿಯನ್ನು ಕಳೆದ ಶೈಕ್ಷಣಿಕ ವರ್ಷದಲ್ಲಿ ಸಿದ್ಧಪಡಿಸಲಾಗಿದೆ.

2.1.5) 'ಕನಕನ ಕಿಂಡಿ' (kanakanakindi.org.in) : ಜಾಲ ತಾಣ:

ಕೇಂದ್ರದ ವತಿಯಿಂದ ಬಿಡುಗಡೆಗೊಳಿಸಲಾದ 'ಕನಕನ ಕಿಂಡಿ' kanakanakindi.org.in ಜಾಲತಾಣದಲ್ಲಿ ಕನಕದಾಸರ ಬದುಕು ಬರೆಹಗಳಿಗೆ ಸಂಬಂಧಿಸಿದಂತೆ ಈ ವರೆಗೆ ಪ್ರಕಟಗೊಂಡಿರುವ ಲೇಖನಗಳ, ಕೃತಿಗಳ ಬಿಬ್ಲಿಯೋಗಾಫಿಯನ್ನು ತಯಾರಿಸಿ ಈ ಯೋಜನೆಯಲ್ಲಿ ಬಳಸಲಾಗಿದೆ. 2003 ರಿಂದ 2014 ವರೆಗಿನ ಕೇಂದ್ರದ ಕಾರ್ಯಚಟುವಟಿಕೆಗಳ ಸ್ಥೂಲ ವರದಿ, ಛಾಯಾ ಚಿತ್ರಗಳನ್ನು (400 ಪುಟಗಳನ್ನೊಳಗೊಂಡ), ಈ ಜಾಲತಾಣದಲ್ಲಿ ಬಳಸಿಕೊಳ್ಳಲಾಗಿದೆ. ಇದಲ್ಲದೆ 2014–15ರ ಸಾಲಿನ ಆವರ್ತನ ಕಾರ್ಯಕ್ರಮಗಳ ವರದಿ, ಛಾಯಾಚಿತ್ರಗಳು ಹಾಗೂ ಪೇಪರ್ ಕಟ್ಟಿಂಗ್‌ಗಳನ್ನು ಈ ಯೋಜನೆಯಲ್ಲಿ ಬಳಸಿಕೊಳ್ಳಲಾಗಿದೆ.

<u>2.2) ಕಿರುಕಾಲಿಕ ಸಂಶೋಧನ ಯೋಜನೆ:</u>

2.2.1) ದಾಸರು ಮತ್ತು ಕರಾವಳಿ

ಕರಾವಳಿ ಪ್ರದೇಶಗಳಲ್ಲಿ 'ದಾಸ'ರ ಪ್ರಸರಣವನ್ನು ವ್ಯಕ್ತಿನಾಮ ಮತ್ತು ಸ್ಥಳನಾಮಗಳ ಕ್ಷೇತ್ರಕಾರ್ಯದ ಮೂಲಕ ಅಧ್ಯಯನ ಮಾಡುವ, ವಿಶ್ಲೇಷಿಸುವ ಜೊತೆಗೆ ಉಡುಪಿಯ ಕಥನಗಳು ಕನಕ ಮತ್ತು ಕೃಷ್ಣರನ್ನು ಮತ್ತೆ ಮತ್ತೆ ಮರುಕಥನ ಮಾಡುತ್ತಿರುವ ಜಾನಪದೀಯ ನೆಲೆಯಲ್ಲೂ ಅಧ್ಯಯನ ಮಾಡುವುದು ಪ್ರಸ್ತುತ ಯೋಜನೆಯ ಉದ್ದೇಶವಾಗಿದೆ.

ಈ ಯೋಜನೆಯಲ್ಲಿ ಕರಾವಳಿ ಪ್ರದೇಶಗಳಲ್ಲಿ ಕನಕ ಮತ್ತು ದಾಸ ಪದಗಳಿಗೆ ಸಂಬಂಧಿಸಿದ ಸ್ಥಳನಾಮಗಳನ್ನು ಗುರುತಿಸಿ, ಕ್ಷೇತ್ರ ಕಾರ್ಯದ ಮೂಲಕ ಅಧ್ಯಯನ ಮಾಡಿ ವೀಶ್ಲೇಷಿಸಲಾಗಿದೆ. ಜೊತೆಗೆ ಉಡುಪಿ ಕ್ಷೇತ್ರ ಮತ್ತು ಕನಕನ ಕಿಂಡಿಯ ಕುರಿತು ಈ ವರೆಗೆ ಪ್ರಕಟಗೊಂಡಿರುವ ಲೇಖನಗಳನ್ನು ಅಧ್ಯಯನ ಮಾಡಿ ಟಿಪ್ಪಣಿ ಮಾಡಿಕೊಳ್ಳಲಾಗಿದೆ.

2.2.2) ರಾಮಧಾನ್ಯ ಚರಿತ್ರೆ ವಿಭಿನ್ನ ಓದುಗಳು

ಈ ಯೋಜನೆಯಲ್ಲಿ ರಾಮಧಾನ್ಯ ಚರಿತೆಯ ಕುರಿತು ಲಭ್ಯವಿರುವ ಈ ವರೆಗಿನ ಅಧ್ಯಯನಗಳನ್ನು ಇಟ್ಟುಕೊಂಡು ಕನ್ನಡ ವಿಮರ್ಶಾ ಲೋಕ ಮತ್ತು ಕನಕದಾಸರ ಕೃತಿ ಲೋಕದ ನಡುವಿನ ಅಂತರ್ ಸಂಬಂಧವನ್ನು ಕೃತಿಯ ತಾತ್ವಿಕತೆ ಮತ್ತು ವಿಭಿನ್ನ ಓದುಗಳ ತಾತ್ವಿಕತೆಯ ಸ್ವರೂಪದ ಹಿನ್ನೆಲೆಯಲ್ಲಿ ಅಧ್ಯಯನ ನಡೆಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಈ ಯೋಜನೆಯಲ್ಲಿ 2014–15ರ ಶೈಕ್ಷಣಿಕ ವರ್ಷದಲ್ಲಿ ರಾಮಧಾನ್ಯ ಚರಿತ್ರೆಯ ಕುರಿತು ಈವರೆಗೆ ನಡೆದಿರುವ ಅಧ್ಯಯನಗಳನ್ನು ವಿಶ್ಲೇಷಣೆ ಮಾಡಿ ಅಧ್ಯಯನ ನಡೆಸಲಾಗಿದೆ.

2.2.3)ಕನಕ ತತ್ವ ರಂಗ ಅಭಿವ್ಯಕ್ತಿಯ ನೆಲೆ

ಪ್ರಸ್ತುತ ಯೋಜನೆಯಲ್ಲಿ ನಾಟಕ ರಚನೆಯ ಮೂಲಕ ಕನಕದಾಸರ ಪುನರ್ ನಿರ್ಮಿತಿಯ ಸಾಮಾಜಿಕ ಸಾಂಸ್ಕೃತಿಕ, ಶೈಕ್ಷಣಿಕ ಸನ್ನಿವೇಶ, ಸಂದರ್ಭವನ್ನು ಅಧ್ಯಯನ ಮಾಡಲಾಗುತ್ತಿದೆ. ಜೊತೆಗೆ ಕನಕದಾಸ ಮತ್ತು ಮರು ಅಭಿವ್ಯಕ್ತಿಯ ನಡುವಿನ ಸಂರಚನಾತ್ಮಕ ಅಧ್ಯಯನ ನಡೆಸುವುದು ಉದ್ದೇಶವಾಗಿದೆ. ಕನಕದಾಸರ ಬದುಕು ಬರೆಹ ಮತ್ತು ಅವರ ಚಿಂತನೆಗಳಿಗೆ ಸಂಬಂಧಿಸದಂತೆ 13 ನಾಟಕಗಳು ಬಂದಿದ್ದು, ಇದರಲ್ಲಿ 5 ನಾಟಕಗಳನ್ನು ಓದಿ ಟಿಪ್ಪಣಿ ಮಾಡಿ ಕೊಳ್ಳಲಾಗಿದೆ. ಇದರ ಜೊತೆಗೆ ಈ ನಾಟಕಗಳ ಕುರಿತಂತೆ ಬಂದಿರುವ ವಿಮರ್ಶೆಯನ್ನು ಓದಿ ಟಿಪ್ಪಣಿ ಮಾಡಲಾಗಿದೆ.

3) ಕನಕ ಪ್ರಸರಣ

ಪ್ರಗತಿಯಲ್ಲಿರುವ ಯೋಜನೆಗಳು

3.1) ಪ್ರಕಟಣೆಗಳು:

3.1.1) ಕನಕ ಅಧ್ಯ0ಯನ ಮಾಲಿಕೆ

3.1.1.1) ಕನಕದಾಸ ಅಧ್ಯಯನ: ಸಮಗ್ರ ಸಂಪುಟ ಭಾಗ – 2

ಕನಕದಾಸ ಅಧ್ಯಯನ ಸಮಗ್ರ ಸಂಪುಟ ಭಾಗ – 2ರಲ್ಲಿ ಕನಕದಾಸರ ಕೃತಿಗಳಾದ ರಾಮಧಾನ್ಯ ಚರಿತೆ, ಮೋಹನ ತರಂಗಿಣಿ, ನಳಚರಿತ್ರೆ, ಹರಿಭಕ್ತಿಸಾರ ಕಾವ್ಯ ಕೃತಿಗಳ ವಿಮರ್ಶೆಗಳಿಗೆ ಸಂಬಂಧಿಸಿದಂತೆ, ಒಟ್ಟು 183 ಲೇಖನಗಳನ್ನೊಳಗೊಂಡ ತಲಾ 1000 ಪುಟಗಳನ್ನು ಹೊಂದಿರುವ ಎರಡು ಸಂಪುಟಗಳ ಮುದ್ರಣ ಕೆಲಸವು ಪ್ರಗತಿಯಲ್ಲಿದೆ.

3.1.2) ಕನಕ ಚಿಂತನ ಪ್ರಚಾರೋಪನ್ಯಾಸಗಳ ಮಾಲಿಕೆ

3.1.2.3) ಕನಕ ಚಿಂತನ : 2014–15 (ಪ್ರಚಾರೋಪನ್ಯಾಸಗಳ ಪ್ರಬಂಧ)

2014–2015ರಲ್ಲಿ 'ಬಾಗಿಲನು ತೆರೆದು... ದೇಗುಲ ಪ್ರವೇಶ– ಸಮಕಾಲೀನ ಸಂವಾದ' ಎಂಬ ವಿಷಯದ ಕುರಿತು ಏರ್ಪಡಿಸಿದ 24 ಪ್ರಚಾರೋಪನ್ಯಾಸ ಪ್ರಬ0ಧಗಳನ್ನು ಈ ಮಾಲಿಕೆಯಲ್ಲಿ ಪ್ರಕಟಿಸಲಾಗುವುದು. ಈವರೆಗೆ 'ಬಾಗಿಲ ತೆರೆದು...' ದೇಗುಲ ಪ್ರವೇಶ– ಸಮಕಾಲೀನ ಸಂವಾದ ಪ್ರಚಾರೋಪನ್ಯಾಸದ 2 ಪ್ರಬಂಧಗಳನ್ನು ಸಂಗ್ರಹಿಸಲಾಗಿದೆ. ಉಳಿದ ಪ್ರಬಂಧಗಳನ್ನು ಸಂಗ್ರಹಿಸಲಾಗುತ್ತಿದೆ.

4) ಕನಕ ವಾಙ್ಮಯ ಕೇಂದ್ರದ ವಿಸ್ತರಣೆ:

4.1) <u>ಗ್ರಂಥಾಲಯ</u>

4.1.1) <u>ಪುಸ್ತಕ ಖರೀದಿ:</u> ಕನಕದಾಸ , ದಾಸ ಪರಂಪರೆ, ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಗೆ ಸಂಬಂಧಿಸಿದ, ಭಕ್ತಿ ಪರಂಪರೆಗೆ ಸಂಬಂಧಿಸಿದ, ತತ್ತ್ವಶಾಸ್ತ್ರ, ಧರ್ಮ, ದಾಸ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಗ್ರಂಥಗಳನ್ನು ಖರೀದಿಸಲಾಗುವುದು.
ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಒಟ್ಟು ರೂ. 7,092.00 ಮೊತ್ತದ 53 ಪುಸ್ತಕಗಳನ್ನು ಖರೀದಿಸಲಾಗಿದೆ. ಕೇಂದ್ರದ ಗ್ರಂಥಾಲಯದಲ್ಲಿ ಒಟ್ಟು 993 ಪುಸ್ತಕಗಳಿವೆ.

4.1.2) <u>ಕನಕ ಕಡತ:</u> ಕನಕದಾಸ ಹಾಗೂ ದಾಸವಾಙ್ಮಯದ ಕುರಿತಾಗಿ ವಿವಿಧ ಮಾಹಿತಿ ಕಡತಗಳನ್ನು ಈ ಕೆಳಗೆ ಸೂಚಿಸಿರುವ ಮಾದರಿ ವಿಷಯಗಳಿಗೆ ಸಂಬಂಧಿಸಿದಂತೆ ಸಿದ್ಧಪಡಿಸಲಾಗುತ್ತಿದೆ.
1). ಕನಕದಾಸ ಮತ್ತು ದಾಸವಾಙ್ಮಯದಕುರಿತು ನಡೆದಿರುವ ಅಧ್ಯಯನಗಳ ಮಾಹಿತಿ.
(ಪಿಹೆಚ್.ಡಿ ಮಹಾಪ್ರಬಂಧ, ಪುಸ್ತಕ, ಲೇಖನ, ಇತ್ಯಾದಿ ಬಗೆಯವು)
2). ನಾಡಿನ ವಿವಿಧ ಕಡೆಗಳಲ್ಲಿ ಕಾರ್ಯಾಚರಿಸುತ್ತಿರುವ ಕನಕದಾಸ ಹಾಗೂ ದಾಸವಾಙ್ಮಯ ಅಧ್ಯಯನ ಕೇಂದ್ರಗಳ ಕುರಿತಂತೆ ಮಾಹಿತಿ.
3). ಕನಕದಾಸರು ಪ್ರಸ್ತಾಪಿಸಿರುವ ಈಗಲೂ ಪ್ರಚಲಿತದಲ್ಲಿರುವ ಹಲವಾರು ಸಾಮಾಜಿಕ, ಸಾಂಸ್ಕೃತಿಕ ಸಮಸ್ಯೆಗಳ, ಸಂಗತಿಗಳ ಕುರಿತಂತೆ ನಡೆಯುತ್ತಿರುವ ವಾಗ್ವಾದಗಳ ಕುರಿತ ಮಾಹಿತಿ.
ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಕನಕ ಕಡತಕ್ಕೆ ಸಂಬಂಧಿಸಿದಂತೆ ಒಟ್ಟು 20 ಲೇಖನಗಳನ್ನು ಸಂಗ್ರಹಿಸಲಾಗಿದೆ.

5) ಪ್ರಸರಣ –ಮಾರಾಟ

<u>ಪುಸ್ತಕ, ಧ್ವನಿಸುರುಳಿ ಪ್ರದರ್ಶನ ಮತ್ತು ಮಾರಾಟ</u>

1. ಕನಕದಾಸ ಸಂಶೋಧನ ಕೇಂದ್ರವು ಕನಕ ತತ್ವ ಚಿಂತನ ಪ್ರಚಾರೋಪನ್ಯಾಸ ಮಾಲಿಕೆಯಲ್ಲಿ 2014ರ ಅಕ್ಟೋಬರ್‌ನಿಂದ 2015ರ ಮಾರ್ಚ್ ತಿಂಗಳುಗಳ ಅವಧಿಯಲ್ಲಿ ರಾಜ್ಯದ ಇತರ ವಿಶ್ವವಿದ್ಯಾನಿಲಯಗಳಾಗಿರುವ ಬೆಂಗಳೂರು, ದಾವಣಗೆರೆ, ಬಿಜಾಪುರ, ಶಿವಮೊಗ್ಗ ವಿಶ್ವವಿದ್ಯಾನಿಲಯಗಳಲ್ಲದೆ ಹೊರರಾಜ್ಯಗಳ ಕರ್ನಾಟಕ ಸಂಘ, ಮುಂಬೈ ಹಾಗೂ ಹೈದರಾಬಾದ್ ವಿಶ್ವವಿದ್ಯಾನಿಲಯಗಳ ಸಂಯೋಜಿತ ಹಾಗೂ ಘಟಕ ಕಾಲೇಜುಗಳು, ಪದವಿಪೂರ್ವ ಕಾಲೇಜುಗಳು ಮತ್ತು ಇತರ ಸಾರ್ವಜನಿಕ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಒಟ್ಟು 24 ಕಡೆಗಳಲ್ಲಿ 'ಬಾಗಿಲ ತೆರೆದು...' ದೇಗುಲ ಪ್ರವೇಶ– ಸಮಕಾಲೀನ ಸಂವಾದ ಎಂಬ ವಿಷಯದ ಕುರಿತು ಪ್ರಚಾರೋಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸಿತ್ತು. **ಈ ಎಲ್ಲಾ 24 ಪ್ರಚಾರೋಪನ್ಯಾಸ ಕಾರ್ಯಕ್ರಮ**ಗಳಲ್ಲೂ ಕನಕದಾಸ ಸಂಶೋಧನ ಕೇಂದ್ರದ ಪ್ರಕಟಣೆಗಳ ಪ್ರದರ್ಶನ ಮತ್ತು ಮಾರಾಟವನ್ನು ಮಾಡಲಾಯಿತು.

2. ದಿನಾಂಕ 14.11.2014 ರಿಂದ 16.11.2014 ವರೆಗೆ **ಮೂಡಬಿದಿರೆ ಆಳ್ವಾಸ್ ಕಾಲೇಜಿನಲ್ಲಿ ನಡೆದ ಆಳ್ವಾಸ್ ನುಡಿಸಿರಿ**ಯಲ್ಲಿ ಕೇಂದ್ರದ ಪ್ರಕಟಣೆಗಳ ಪ್ರದರ್ಶನ ಮತ್ತು ಮಾರಾಟವನ್ನು ಮಾಡಲಾಯಿತು.

3. ದಿನಾಂಕ 03.01.2015ರಂದು ಕನಕದಾಸ ಸಂಶೋಧನ ಕೇಂದ್ರವು ಮಂಗಳೂರು ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರ ಸಹಯೋಗದಲ್ಲಿ ಮಂಗಳೂರಿನ ವಿಶ್ವವಿದ್ಯಾನಿಲಯ ಕಾಲೇಜಿನ 'ರವೀಂದ್ರ ಕಲಾ ಭವನ'ದಲ್ಲಿ ಏರ್ಪಡಿಸಿದ ಅಂತರ್ ಕಾಲೇಜು ಮತ್ತು ಸಾರ್ವಜನಿಕ ಮಟ್ಟದ **'ಕನಕ ಕೀರ್ತನ'** ಗಾಯನ ಕಾರ್ಯಕ್ರಮದಲ್ಲಿ ಕೇಂದ್ರದ ಪ್ರಕಟಣೆಗಳ ಪ್ರದರ್ಶನ ಮತ್ತು ಮಾರಾಟವನ್ನು ಮಾಡಲಾಯಿತು.

4. ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆ ಮತ್ತು ರಾಷ್ಟ್ರೀಯ ಅನುವಾದ ಪ್ರಾಧಿಕಾರ, ಮೈಸೂರು ಇವುಗಳ ಸಹಯೋಗದೊಂದಿಗೆ ದಿನಾಂಕ 28.01.2015 ಮತ್ತು 29.01.2015 ರಂದು ಮಂಗಳಗಂಗೋತ್ರಿ ಹಳೆ ಸೆನೆಟ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಕೇಂದ್ರದ ಪ್ರಕಟಣೆಗಳನ್ನು ಪ್ರದರ್ಶನ ಮತ್ತು ಮಾರಾಟವನ್ನು ಮಾಡಲಾಯಿತು.

5. ಕನಕದಾಸ ಸಂಶೋಧನ ಕೇಂದ್ರದ ವತಿಯಿಂದ ದಿನಾಂಕ 17.01.2015ರಂದು ಮಂಗಳಗಂಗೋತ್ರಿಯ ಹೊಸ ಸೆನೆಟ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸ್ನಾತಕೋತ್ತರ ಅಂತರ್ ವಿಭಾಗೀಯ ಮತ್ತು ಬೋಧಕ/ಬೋಧಕೇತರ ಮಟ್ಟದಲ್ಲಿ

ಏರ್ಪಡಿಸಿದ **'ಕನಕ ಗಂಗೋತ್ರಿ'** ಕನಕದಾಸರ ಕೀರ್ತನ ಗಾಯನ ಕಾರ್ಯಕ್ರಮದಲ್ಲಿ ಕೇಂದ್ರದ ಪ್ರಕಟಣೆಗಳ ಪ್ರದರ್ಶನ ಮತ್ತು ಮಾರಾಟವನ್ನು ಮಾಡಲಾಯಿತು.

6. ಕನಕದಾಸ ಸಂಶೋಧನ ಕೇಂದ್ರದ ವತಿಯಿಂದ 07.04.2015ರಂದು ಮಂಗಳಗಂಗೋತ್ರಿಯ ಮಂಗಳ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ **'ಕನಕ ಸ್ಮೃತಿ'** ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಕೇಂದ್ರದ ಪ್ರಕಟಣೆಗಳ ಪ್ರದರ್ಶನ ಮತ್ತು ಮಾರಾಟವನ್ನು ಮಾಡಲಾಯಿತು.

41. ಕೊಡವ ಸಾಂಸ್ಕೃತಿಕ ಅಧ್ಯಯನ ಪೀಠ

ಸಂಯೋಜಕರು: ಡಾ. ಕೆ.ಎಂ. ಲೋಕೇಶ್

1. ಕೊಡವ ಸಾಂಸ್ಕೃತಿಕ ಅಧ್ಯಯನ ಪೀಠವು ದಿನಾಂಕ 05.01.2015ರಂದು ಸರ್ಕಾರಿ ಪದವಿಪೂರ್ವ ಕಾಲೇಜು, ಮಡಿಕೇರಿ, ಇಲ್ಲಿ ಏರ್ಪಡಿಸಿದ ಪ್ರಚಾರೋಪನ್ಯಾಸ ಕಾರ್ಯಕ್ರಮದಲ್ಲಿ ಡಾ. ಶ್ರೀಧರ ಹೆಗಡೆ (ಉಪನ್ಯಾಸಕರು, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು, ಮಡಿಕೇರಿ) ಇವರು ಕೊಡಗಿನಲ್ಲಿ ರಾಷ್ಟ್ರೀಯತೆ ಮತ್ತು ಸ್ವಾತಂತ್ರ್ಯ ಸಂಗ್ರಾಮ ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸವನ್ನು ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ. ಬೆಳ್ಳಿಯಪ್ಪ ಬಿ.ಎಂ, ಪ್ರಾಂಶುಪಾಲರು, ಸರ್ಕಾರಿ ಪದವಿಪೂರ್ವ ಕಾಲೇಜು, ಮಡಿಕೇರಿ ವಹಿಸಿದ್ದರು. ಮಡಿಕೇರಿ ವಾರ್ತಾಧಿಕಾರಿ ಶ್ರೀ. ಚಿನ್ನಸ್ವಾಮಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸುಮಾರು 200 ವಿದ್ಯಾರ್ಥಿಗಳು, ಶಿಕ್ಷಕರು ಭಾಗವಹಿಸಿದ್ದರು.
2. ಕೊಡವ ಸಾಂಸ್ಕೃತಿಕ ಅಧ್ಯಯನ ಪೀಠವು ದಿನಾಂಕ 05.01.2015ರಂದು ಶ್ರೀ ರಾಜೇಶ್ವರಿ ಪದವಿ ಪೂರ್ವ ಕಾಲೇಜು, ಮಡಿಕೇರಿ ಇಲ್ಲಿ ಏರ್ಪಡಿಸಿದ ಪ್ರಚಾರೋಪನ್ಯಾಸ ಕಾರ್ಯಕ್ರಮದಲ್ಲಿ ಶ್ರೀಮತಿ ಮನೋರಮಾ (ಸಂಪಾದಕರು, ಸೂಪುರಾ ಭ್ರಮರಿ, ಮಡಿಕೇರಿ) ಇವರು ಕೊಡಗಿನ ಇತಿಹಾಸದಲ್ಲಿ ಧಾರ್ಮಿಕ ಸಂಸ್ಕೃತಿ ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸವನ್ನು ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಹೆಚ್.ಎಸ್. ವಾಸುದೇವ ಕಾರ್ಯದರ್ಶಿ, ಶ್ರೀ ರಾಜೇಶ್ವರಿ ಪದವಿ ಪೂರ್ವ ಕಾಲೇಜು ವಹಿಸಿದ್ದರು. ಶ್ರೀ. ಮಂದಣ್ಣ ಪಿ.ಕೆ. ಪ್ರಾಂಶುಪಾಲರು, ಶ್ರೀ ರಾಜೇಶ್ವರಿ ಪದವಿ ಪೂರ್ವ ಕಾಲೇಜು , ಮಡಿಕೇರಿ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸುಮಾರು 200 ವಿದ್ಯಾರ್ಥಿಗಳು, ಶಿಕ್ಷಕರು ಭಾಗವಹಿಸಿದ್ದರು.
3. ಕೊಡವ ಸಾಂಸ್ಕೃತಿಕ ಅಧ್ಯಯನ ಪೀಠವ ದಿನಾಂಕ 06.01.2015ರಂದು ಪದವಿ ಪೂರ್ವ ಕಾಲೇಜು, ಮದೆನಾಡು ಇಲ್ಲಿ ಏರ್ಪಡಿಸಿದ ಪ್ರಚಾರೋಪನ್ಯಾಸ ಕಾರ್ಯಕ್ರಮದಲ್ಲಿ ಡಾ. ಶ್ರೀಧರ ಹೆಗಡೆ (ಉಪನ್ಯಾಸಕರು, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು, ಮಡಿಕೇರಿ) ಇವರು ಕವಿಗಳು ಕಂಡ ಕೊಡಗು ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸವನ್ನು ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಪೆಕ್ಕಡೆ ಗುಲಾಬಿ ಜನಾರ್ಧನ ಪ್ರಾಂಶುಪಾಲರು, ಪದವಿಪೂರ್ವ ಕಾಲೇಜು, ಮದೆನಾಡು ವಹಿಸಿದ್ದರು. ಕಾರ್ಯಕ್ರಮದಲ್ಲಿ ಸುಮಾರು 250 ವಿದ್ಯಾರ್ಥಿಗಳು, ಶಿಕ್ಷಕರು ಭಾಗವಹಿಸಿದ್ದರು.
4. ಪೀಠವು ತನ್ನ ಪತ್ರಾಗಾರಕ್ಕೆ ಕೆಲವು ಅಮೂಲ್ಯ ದಾಖಲೆಗಳು ಹಾಗೂ ಪುಸ್ತಕಗಳ ನಕಲನ್ನು ಪಡೆದುಕೊಂಡಿದೆ.
5. ಕೊಡವ ಭಾಷಾ ಅರ್ಥಕೋಶದ ಕಾರ್ಯವು ಅಂತಿಮ ಹಂತದಲ್ಲಿದೆ.
6. ಡಾ. ಎಂ.ಜಿ. ನಾಗರಾಜ್ ಇವರ ಕೊಡಗಿನ ಕೆಂಬಟ್ಟಿ ಸಮುದಾಯ ಪುಸ್ತಕದ ಪರಿಷ್ಕೃತ ಆವೃತಿಯ ಪ್ರಕಟಣೆಗೆ ತಯಾರಿಕೆಯಲ್ಲಿದೆ.

42. ಡಾ. ಎನ್.ಜಿ. ಪಾವಂಜೆ ಲಲಿತಕಲಾ ದತ್ತಿ ಪೀಠ

ಸಂಯೋಜಕರು: ಪ್ರೊ. ರವಿಶಂಕರ್ ರಾವ್

ಎನ್.ಜಿ. ಪಾವಂಜೆ ಪೀಠವು ವೈಯಕ್ತಿಕ ನಿಧಿಯಿಂದ ಸ್ಥಾಪಿತವಾದ ಪೀಠವಾಗಿದ್ದು, ಇದನ್ನು ಕು. ಅನಸೂಯ ಪಾವಂಜೆಯವರು ತನ್ನ ತೀರ್ಥರೂಪರಾದ ದಿ. ಎನ್.ಜಿ. ಪಾವಂಜೆಯವರ ಹೆಸರಿನಲ್ಲಿ ಸ್ಥಾಪಿಸಿದರು. ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಖ್ಯಾತರಾದ ಚಿತ್ರಕಲಾವಿದರಾದ ದಿ.ಎನ್.ಜಿ.ಪಾವಂಜೆಯವರ ಹೆಸರಿನಲ್ಲಿ ಪೀಠವು ತನ್ನ

ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ ಹಾಗೂ ಇವು ಚಿತಕಲೆ (painting and drawing)ಯನ್ನು ಕೇಂದ್ರವಾಗಿಟ್ಟುಕೊಂಡಿರುತ್ತವೆ. ಇತ್ತೀಚೆಗೆ ಪೀಠವು ರೇಖಾಚಿಳಕ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಇದು ಶಾಲಾ ಮಕ್ಕಳಲ್ಲಿ ಕಲಾ ಪ್ರವೃತ್ತಿಯನ್ನು ಹುರಿದುಂಬಿಸುವಲ್ಲಿ ವಿಶೇಷ ಕಾಳಜಿವಹಿಸಲಾಯಿತು. ಅನೇಕ ಸ್ಥಳೀಯ ಚಿತ್ರಕಲಾವಿದರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಇದೇ ರೀತಿ, ಪೀಠವು ಒಂದು ಒಳ್ಳೆಯ ಆರ್ಕೈವ್‌ನ್ನು ಬೆಳೆಸುವಲ್ಲಿ ವಿಶೇಷ ಶ್ರಮವಹಿಸುತ್ತಾ ಇದೆ. ವಿಶಿಷ್ಟ ಪುಸ್ತಕ ಹಾಗೂ ದಾಖಲೆಗಳನ್ನು ಒಳಗೊಂಡ ಪಾವಂಜೆ ಆರ್ಕೈವ್‌ನ್ನು ಮಂಗಳೂರು ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ಇರಿಸಲಾಗಿದೆ. ಇದಕ್ಕೆ ಪ್ರಸಕ್ತ ವರುಷದಲ್ಲಿ ಪೀಠವು ಹೊಸ ಪುಸ್ತಕಗಳನ್ನು ಹಾಗೂ ಎನ್.ಜಿ.ಪಾವಂಜೆಯವರ ಜೀವನ ಹಾಗೂ ಕಾಲಾವಧಿಯ ಬಗ್ಗೆ ದಾಖಲೆಗಳನ್ನು ಒಟ್ಟು ಸೇರಿಸುವಲ್ಲಿ ಕಾರ್ಯಪ್ರವೃತ್ತವಾಯಿತು. ಈ ಪಾವಂಜೆ ಆರ್ಕೈವ್‌ನ್ನು ಅಚ್ಚುಕಟ್ಟಾಗಿ ಬೆಳೆಸಿ, ಅದು ಕಲಾ ಸಂಶೋಧನೆಗೆ ಪೂರಕವಾಗಿ ಬೆಳೆಯುವಂತೆ ಹಾಗೂ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಸಂಶೋಧನೆಗೆ ಉತ್ತಮ ಪೀಠಿಕೆಯಾಗುವಂತೆ ಮುಂದೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

43. ಸಾಗರ ಮತ್ತು ವಾಯುಗೋಲ ವಿಜ್ಞಾನ ತಂತ್ರಜ್ಞಾನ ಘಟಕ : –

ಸಂಯೋಜಕರು: ಡಾ. ಸಿ ಕೃಷ್ಣಯ್ಯ

44. ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳುಪೀಠ :

ಸಂಯೋಜಕರು: ಡಾ. ಕೆ. ಅಭಯ ಕುಮಾರ್

45. ಯು.ಜಿ.ಸಿ ತರಬೇತಿ ಕೇಂದ್ರ :

ಸಂಯೋಜಕರು : ಡಾ. ಪಿ. ಎಲ್ ಧರ್ಮ

ಕೋಚಿಂಗ್ ಸೆಂಟರ್‌ನಲ್ಲಿ ಎಪ್ರಿಲ್ 2014– ಮಾರ್ಚ್2015 ನೇ ಸಾಲಿಗೆ ನಡೆದಂತಹ ವಿಶೇಷ ತರಗತಿಗಳ ವಿವರಗಳು ಈ ಕೆಳಗಿನಂತಿದೆ.

Sl.No	Date	Lecturers	Topic
1	02.02.2015	ಪ್ರೊ. ರಾಜರಾಂ ತೋಳ್ಪಾಡಿ	ಭಾರತೀಯ ಸಂವಿಧಾನ
2	1302.2015	ಡಾ. ಗೋವಿಂದರಾಜು ಬಿ. ಎಂ	ಆಧುನಿಕ ಯುಗದಲ್ಲಿ ಸಾಮಾಜಿಕ ಚಿಂತನೆ ಮತ್ತು ಸಿದ್ಧಾಂತಗಳ ರಚನೆ
3	27.02.2015	ಡಾ. ಗೋವಿಂದರಾಜು ಬಿ. ಎಂ	ಗ್ರಾಮೀಣ ಸಮಾಜಶಾಶ್ತ್ರ
4	06.03.2015	ಪ್ರೊ. ಜೋಗನ್ ಶಂಕರ್	ಸಂಶೋಧನಾ ವಿಧಾನ
5	07.03.2015	ಪ್ರೊ. ಜೋಗನ್ ಶಂಕರ್	ಸಾಮಾಜಿಕ ಸಂಶೋಧನೆಯ ಅಂಕಿ ಅಂಶಗಳು
6	13.03.2015	ಡಾ. ವಿನಯ್ ರಜತ್ ಡಿ	ಭಾರತೀಯ ಸಮಾಜದ ಪರಿಕಲ್ಪನೆ ಮತ್ತು ಸಾಮಾಜಿಕ ಶ್ರೇಣೀಕರಣದಲ್ಲಿ ಬದಲಾವಣೆ
7	20.03.2015	ಡಾ. ವಿನಯ್ ರಜತ್ ಡಿ	ಸೈದ್ಧಾಂತಿಕ ದೃಷ್ಟಿಕೋನದಲ್ಲಿ ಭಾರತೀಯ ಸಮಾಜ ಮತ್ತು ಸಮಕಾಲೀನ ವಿಚಾರಗಳು
8	28.03.2015	ಸಬಿತ	ಸಮಾಜಶಾಸ್ತ್ರದ ಮೂಲಭೂತ ತತ್ವಗಳು
9	04.04.2015	ಸಬಿತ	ಲಿಂಗ ಮತ್ತು ಸಮಾಜ
10	17.04.2015	ಡಾ. ವಿನಯ್ ರಜತ್ ಡಿ	ಸಮಾಜಶಾಸ್ತ್ರದ ಅಭಿವೃದ್ಧಿ
11	18.04.2015	ಪ್ರೊ. ಜೋಗನ್ ಶಂಕರ್	ಉದ್ಯಮ ಮತ್ತು ಸಮಾಜ

46. ವಿಜಯ ಬ್ಯಾಂಕ್ ಜೀವಿ ಪರಿಸರ ವಿಜ್ಞಾನ ಪೀಠ :

ಸಂಯೋಜಕರು: ಡಾ. ಜಿ. ಕೃಷ್ಣಕುಮಾರ್

ವಿಜಯಬ್ಯಾಂಕ್ ಪೀಠದಿಂದ ವಿಶ್ವವಿದ್ಯಾನಿಲಯದಲ್ಲಿ ಸಸ್ಯೋದ್ಯಾನವನ್ನು ಸ್ಥಾಪಿಸಲಾಗಿದೆ. ಈ ಸಸ್ಯೋದ್ಯಾನ ಔಷಧೀಯ ಸಸ್ಯಗಳು ಮತ್ತು ಪಶ್ಚಿಮ ಘಟ್ಟದ ಸಸ್ಯ ಪ್ರಭೇದಗಳನ್ನು ಹೊಂದಿದೆ. ಇವು ಪಶ್ಚಿಮ ಘಟ್ಟ ಪ್ರದೇಶದ ಔಷದೀಯ ಮತ್ತು ಇತರ ಜಾತಿಯ ಸಸ್ಯ ಸಂರಕ್ಷಣೆಗೆ ಪ್ರಯೋಜನಕಾರಿ. ಈ ಸಸ್ಯೋದ್ಯಾನವು ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಮತ್ತು ಸಾರ್ವಜನಿಕರಿಗೂ ಅವುಗಳ ಉಪಯೋಗಗಳ ಬಗ್ಗೆ ಅರಿವು ಮೂಡಿಸಲು ಹಾಗೂ ಸಂರಕ್ಷಿಸಲು ಪ್ರಯೋಜನಕಾರಿ.

ಪೀಠವು 2014–15 ರಲ್ಲಿ ಈ ಕೆಳಗಿನ ಚಟುವಟಿಕೆಗಳನ್ನು ಹಮ್ಮಿಕೊಂಡಿತ್ತು:

1. ಸಸ್ಯೋದ್ಯಾನದಲ್ಲಿ ಎರೆಹುಳು ಗೊಬ್ಬರ ಘಟಕವನ್ನು ನಿರ್ಮಿಸಲಾಯಿತು. ಇವುಗಳ ತಯಾರಿಕೆಗೆ ಸಸ್ಯೋದ್ಯಾನ ಹಾಗೂ ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಮರಗಳ ಎಲೆಗಳನ್ನೇ ಉಪಯೋಗಿಸಲಾಗುತ್ತಿದೆ.
2. ಔಷದೀಯ ಮತ್ತು ಪಶ್ಚಿಮ ಘಟ್ಟ ಪ್ರದೇಶದ ಸಸ್ಯಗಳ ಹಾಗೂ ಅವುಗಳ ಉಪಯೋಗಗಳ ಬಗ್ಗೆ ತಿಳಿಯಲು ಹತ್ತಿರದ ಶಾಲೆಯ ಸ್ಕೌಟ್ ವಿದ್ಯಾರ್ಥಿಗಳು ಸಸ್ಯೋದ್ಯಾನಕ್ಕೆ ಭೇಟಿ ನೀಡಿದ್ದರು.
3. ಸುಮಾರು 75 ಬಗೆ0ಯ ಸಸಿಗಳನ್ನು ಈ ಮೇಲಿನ ಶಾಲೆಯ ಆವರಣದಲ್ಲಿ ನೆಡಲು ನೀಡಲಾಯಿತು.
4. ಅಪರೂಪದ ಸಸ್ಯಗಳಾದ ನೆಂಫೊಯಿಡಿಸ್ ಕೃಷ್ಣಕೇಸರ, ಐಸೊಯಿಟಿಸ್ ಕೊರಮೆಂಡಲಿಯನ ಮತ್ತು ಸೈಜ಼ಿಯ ಡಿಜಿಟಟ ಗಳನ್ನು ಸಸ್ಯೋದ್ಯಾನದಲ್ಲಿ ನೆಡಲಾಯಿತು.
5. ಹೈಸ್ಕೂಲು ವಿದ್ಯಾರ್ಥಿಗಳಿಗಾಗಿ ಎರಡು ಪರಿಸರ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು.

ಹರೇಕಳ ಶ್ರೀ ರಾಮಕೃಷ್ಣ ಪ್ರೌಢಶಾಲೆಯಲ್ಲಿ 'ಜಲಸಂರಕ್ಷಣೆ'ಯ ಬಗ್ಗೆ ಹಳೆಯಂಗಡಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ವಿಭಾಗದ ಸಹ ಪ್ರಾಧ್ಯಾಪಕರಾದ ಶ್ರೀ ಜಗದೀಶ ಬಾಳ ಇವರು ಉಪನ್ಯಾಸ ನೀಡಿದರು.

ವಿಶ್ವಮಂಗಳ ಪ್ರೌಢಶಾಲೆ, ಮಂಗಳಗಂಗೋತ್ರಿಯಲ್ಲಿ 'ಜೀವ ವೈವಿಧ್ಯತೆ ಹಾಗೂ ವನ್ಯಜೀವಿಗಳ ಸಂರಕ್ಷಣೆ'ಯ ಬಗ್ಗೆ ವನ್ಯಜೀವಿ ತಜ್ಞ ಡಾ. ಸೂರ್ಯನಾರಾಯಣ ರಾವ್ ಅಡ್ಡೂರು ಇವರು ಉಪನ್ಯಾಸ ನೀಡಿದರು.

ಊ) ಸಾಮಾನ್ಯ ಚಟುವಟಿಕೆಗಳು

47. ಕ್ರೀಡೆ

ನಿರ್ದೇಶಕರು: ಡಾ. ಹೆಚ್. ನಾಗಲಿಂಗಪ್ಪ (31.08.2014ರ ತನಕ)
ಡಾ. ಕಿಶೋರ್ ಕುಮಾರ್ ಸಿ.ಕೆ. (01.09.2014ರಿಂದ)

1. ವರದಿ ವರ್ಷದಲ್ಲಿ ಅಂತರ ವಿಶ್ವವಿದ್ಯಾನಿಲಯ ಕ್ರೀಡಾ ಸ್ಪರ್ಧೆಗಳಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಚಟುವಟಿಕೆಗಳು ಹಾಗೂ ಸಾಧನೆಗಳು:

ಕ್ರ ಸ.	ಕ್ರೀಡೆಗಳು	ಮೆನೇಜರ್	ತರಬೇತುದಾರರು	ತಂಡದ ಹಾಗೂ ವೈಯಕ್ತಿಕ ಫಲಿತಾಂಶದ ವಿವರಗಳು
01.	ಅತ್ಲೆಟಿಕ್ಸ್ (ಅಖಿಲ ಭಾರತ) (ಪುರುಷರು ಮತ್ತು	1. ಶ್ರೀ ತಿಲಕ್ ದೈಹಿಕ ಶಿಕ್ಷಣ ನಿರ್ದೇಶಕರು,	1. ಶ್ರೀ ರಾಧಾಕೃಷ್ಣ ಹೆಚ್. ಬಿ., ದೈಹಿಕ ಶಿಕ್ಷಣ ನಿರ್ದೇಶಕರು,	**<u>ಪುರುಷರ ವಿಭಾಗ:</u>** 1. ಸೂರಜ್, ಆಳ್ವಾಸ್ ಕಾಲೇಜು, ಮೂಡಬಿದ್ರಿ, ಇವರು 800 ಮೀ. ಓಟದಲ್ಲಿ ಚಿನ್ನದ ಪದಕ

	ಮಹಿಳೆಯರು) ರಾಜೀವ್ ಗಾಂಧಿ ಯುನಿವರ್ಸಿಟಿ ಆಫ್ ಹೆಲ್ತ್ ಸೈನ್ಸಸ್, ಬೆಂಗಳೂರು	ಆಳ್ವಾಸ್ ಕಾಲೇಜು, ಮೂಡಬಿದ್ರಿ 2. ಶ್ರೀ ಪ್ರವೀಣ್ ಕುಮಾರ್ ದೈಹಿಕ ಶಿಕ್ಷಣ ನಿರ್ದೇಶಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಹಳೆಯಂಗಡಿ 3. ಮೀನಾಕ್ಷಿ, ದೈಹಿಕ ಶಿಕ್ಷಣ ನಿರ್ದೇಶಕರು, ಆಳ್ವಾಸ್ ಕಾಲೇಜು, ಮೂಡಬಿದ್ರಿ	ಸರಕಾರಿ ಪ್ರಥಮ ದರ್ಜೆ ಕಾಲೇಜು, ವಾಮದಪದವು 2. ಶ್ರೀ ಶಾಂತರಾಮ ರೈ, ಕೋಚ್, ಆಳ್ವಾಸ್ ಕಾಲೇಜ್, ಮೂಡಬಿದ್ರಿ 3. ಶ್ರೀ ಸೇಸಪ್ಪ, ದೈಹಿಕ ಶಿಕ್ಷಣ ನಿರ್ದೇಶಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಪುತ್ತೂರು 4. ಶ್ರೀ ರಾಮಚಂದ್ರ ಕೆ. ದೈಹಿಕ ಶಿಕ್ಷಣ ನಿರ್ದೇಶಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ವಿಟ್ಲ 5. ಶ್ರೀ ಮಾನೆ, ಅಥ್ಲೆಟಿಕ್ ಕೋಚ್, ಎಸ್.ಡಿ.ಎಂ. ಕಾಲೇಜು, ಉಜಿರೆ 6. ಶ್ರೀ ದಾಮೋದರ ಗೌಡ, ಅಥ್ಲೆಟಿಕ್ ಕೋಚ್, ಡಿ.ವೈ.ಇ.ಎಸ್., ಮಂಗಳ ಸ್ಟೇಡಿಯಂ, ಮಂಗಳೂರು	(1:52.76 ಸೆ.) 2. ಶ್ರೀಕಾಂತ ಮಧ್ಯಸ್ಥ ಸಿ.ಪಿ., ಆಳ್ವಾಸ್ ಕಾಲೇಜು, ಮೂಡಬಿದ್ರಿ, ಇವರು 100 ಮೀ. ಹರ್ಡಲ್‌ನಲ್ಲಿ ಚಿನ್ನದ ಪದಕ (14.56) 3. ಶ್ರೀನಿತ್ ಮೋಹನ್, ಆಳ್ವಾಸ್ ಕಾಲೇಜ್, ಮೂಡಬಿದ್ರಿ, ಇವರು ಎತ್ತರ ಜಿಗಿತದಲ್ಲಿ ಚಿನ್ನದ ಪದಕ (2.20 ಮೀ.) 4. ಸಂಶೀರ್ ಎಸ್.ಇ., ಆಳ್ವಾಸ್ ಕಾಲೇಜ್, ಮೂಡಬಿದ್ರಿ, ಇವರು ಉದ್ದ ಜಿಗಿತದಲ್ಲಿ ಬೆಳ್ಳಿ ಪದಕ (7.45 ಮೀ.) 5. ಭರತ್ ಕೆ.ಎ., ಆಳ್ವಾಸ್ ಕಾಲೇಜ್, ಮೂಡಬಿದ್ರಿ, ಇವರು 800 ಮೀ. ಓಟದಲ್ಲಿ ಬೆಳ್ಳಿ ಪದಕ (1:52.90 ಸೆ.) 6. ಸುಮಂತ್ ಎಂ.ಕೆ., ಆಳ್ವಾಸ್ ಕಾಲೇಜ್, ಮೂಡಬಿದ್ರಿ, ಇವರು 110 ಮೀ. ಹರ್ಡಲ್ಸ್ ನಲ್ಲಿ ಬೆಳ್ಳಿ ಪದಕ (14.75) 7. ನಿಜಿಲ್ ಜಾಕ್‌ಸನ್, ಆಳ್ವಾಸ್ ಕಾಲೇಜ್, ಮೂಡಬಿದ್ರಿ, ಇವರು ಪೋಲ್ ವಾಲ್ಟ್ ನಲ್ಲಿ ಬೆಳ್ಳಿ ಪದಕ (4.50 ಮೀ) 8. ಚೇತನ್ ಬಿ., ಆಳ್ವಾಸ್ ಕಾಲೇಜ್, ಮೂಡಬಿದ್ರಿ, ಇವರು ಎತ್ತರ ಜಿಗಿತದಲ್ಲಿ ಕಂಚಿನ ಪದಕ (2.16 ಮೀ.) 9. ಶಿಜು ಸಿ.ಪಿ., ಆಳ್ವಾಸ್ ಕಾಲೇಜ್, ಮೂಡಬಿದ್ರಿ, ಇವರು ಹಾಫ್ ಮ್ಯಾರಥಾನ್‌ನಲ್ಲಿ ಕಂಚಿನ ಪದಕ (1:11:51.52) **ಮಹಿಳೆಯರ ವಿಭಾಗ:** 1. ಪ್ರಿಯಾಂಕ ಕಲಾಗಿ ಎಸ್., ಆಳ್ವಾಸ್ ಕಾಲೇಜು, ಮೂಡಬಿದ್ರಿ, ಇವರು 100 ಮೀ. ಓಟದಲ್ಲಿ ಚಿನ್ನದ ಪದಕ(11.96 ಸೆ.) ಮತ್ತು 200 ಮೀ. ಓಟದಲ್ಲಿ ಕ್ಂಚಿನ ಪದಕ (24.76 ಸೆ.) . 2. ಕೃಷ್ಣ ರಚನ್, ಆಳ್ವಾಸ್ ಕಾಲೇಜು, ಮೂಡಬಿದ್ರಿ, ಇವರು ಪೋಲ್ ವಾಲ್ಟ್ ನಲ್ಲಿ ಬೆಳ್ಳಿಯ ಪದಕ (3.40 ಮೀ.) 3. ಪ್ರಿಯಾಂಕ ಜೆ.ಎಸ್., ಪದುವ ಕಾಲೇಜು, ನಂತೂರು, ಇವರು ಡಿಸ್ಕಸ್ ಥ್ರೋ ನಲ್ಲಿ ಬೆಳ್ಳಿಯ ಪದಕ (40.19 ಮೀ.) 4. ರಶ್ಮಿ ಕೆ., ಆಳ್ವಾಸ್ ಕಾಲೇಜ್ ಆಫ್ ಫಿಸಿಕಲ್ ಎಜುಕೇಶನ್, ಮೂಡಬಿದ್ರಿ, ಜಾವಲಿನ್ ಥ್ರೋನಲ್ಲಿ ಬೆಳ್ಳಿಯ ಪದಕ(46.05 ಮೀ.) ಪಡೆದಿರುತ್ತಾರೆ. 5. ಮಂಗಳೂರು ವಿವಿ ತಂಡ 4ಥ100 ಮೀ. ರಿಲೇಯಲ್ಲಿ ಚಿನ್ನದ ಪದಕ ಪಡೆದಿರುತ್ತಾರೆ. 6. ಮಂಗಳೂರು ವಿವಿ ತಂಡ 4ಥ400 ಮೀ. ರಿಲೇಯಲ್ಲಿ ಚಿನ್ನದ ಪದಕ ಪಡೆದಿರುತ್ತಾರೆ
02	ಬ್ಯಾಡ್‌ಮಿಂಟನ್ (ಮಹಿಳೆಯರು) ಭಾರತೀಯಾರ್	ಶ್ರೀಮತಿ ಜಯಶ್ರೀ ನಾಯಕ್, ದೈಹಿಕ ಶಿಕ್ಷಣ ನಿರ್ದೇಶಕಿ,	ಪಿ.ಜಿ. ಪಾಪನ್ ಕುಮಾರ್, ಬ್ಯಾಡ್‌ಮಿಂಟನ್ ಕೋಚ್,	ಪ್ರಿ–ಕ್ವಾರ್ಟರ್ ಫೈನಲ್ ನಲ್ಲಿ ಸೋಲು.

	ವಿಶ್ವವಿದ್ಯಾನಿಲಯ, ಕೊಯಮುತ್ತೂರು ಡಿಸೆಂಬರ್ 26–29, 2014 (ದಕ್ಷಿಣ ವಲಯ)	ಎಂ,ಜಿ,ಎಂ. ಕಾಲೇಜು, ಉಡುಪಿ	ಮಡಿಕೇರಿ	
03.	ಬ್ಯಾಡ್‌ಮಿಂಟನ್ (ಪುರುಷರು) ಭಾರತೀಯಾರ್ ವಿಶ್ವವಿದ್ಯಾನಿಲಯ, ಕೊಯಮುತ್ತೂರು ಡಿಸೆಂಬರ್ 26–29, 2014 (ದಕ್ಷಿಣ ವಲಯ)	ಶ್ರೀಮತಿ ಜಯಶ್ರೀ ನಾಯಕ್, ದೈಹಿಕ ಶಿಕ್ಷಣ ನಿರ್ದೇಶಕಿ, ಎಂ,ಜಿ,ಎಂ. ಕಾಲೇಜು, ಉಡುಪಿ	ಪಿ.ಜಿ. ಪಾಪನ್ ಕುಮಾರ್, ಬ್ಯಾಡ್ ಮಿಂಟನ್ ಕೋಚ್, ಮಡಿಕೇರಿ	ಪ್ರಥಮ ಸುತ್ತಿನಲ್ಲಿ ಸೋಲು.
04	ಬಾಲ್ ಬ್ಯಾಡ್‌ಮಿಂಟನ್ (ಪುರುಷರು) ಎಸ್.ಆರ್.ಎಂ. ವಿಶ್ವವಿದ್ಯಾನಿಲಯ, ಚೆನ್ನೈ ಜನವರಿ 5–9, 2015 ಅಖಿಲ ಭಾರತ	ಶ್ರೀ ರವಿಶಂಕರ್ ಬಿ.ಎನ್., ದೈಹಿಕ ಶಿಕ್ಷಣ ನಿರ್ದೇಶಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಪುಂಜಾಲಕಟ್ಟೆ	ಡಾ. ಪ್ರಸನ್ನ ಬಿ.ಕೆ. ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರು ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ	ಪ್ರಿ–ಕ್ವಾರ್ಟರ್ ಫೈನಲ್ ನಲ್ಲಿ ಸೋಲು.
05	ಬಾಲ್ ಬ್ಯಾಡ್‌ಮಿಂಟನ್ (ಮಹಿಳೆ0ಯರು) ಬಿ.ಎಸ್.ಅಬ್ದುರ್ ರಹಮಾನ್ ಯೂನಿವರ್ಸಿಟಿ, ಚೆನ್ನೈ ಡಿಸೆಂಬರ್ 26–30, 2014 ಅಖಿಲ ಭಾರತ	ಹರ್ಷಿತ ಎನ್. ಶೆಟ್ಟಿ, ದೈಹಿಕ ಶಿಕ್ಷಣ ನಿರ್ದೇಶಕರು, ಆಳ್ವಾಸ್ ಕಾಲೇಜು, ಮೂಡಬಿದ್ರಿ	ಶ್ರೀ ಪ್ರವೀಣ್ ಕುಮಾರ್ ದೈಹಿಕ ಶಿಕ್ಷಣ ನಿರ್ದೇಶಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಹಳೆಯಂಗಡಿ	ಅಖಿಲ ಭಾರತ ಮಟ್ಟದಲ್ಲಿ ಚಿನ್ನದ ಪದಕ
06	ಬಾಸ್ಕೆಟ್ ಬಾಲ್ (ಪುರುಷರು) ಸತ್ಯಭಾಮ ವಿಶ್ವವಿದ್ಯಾನಿಲಯ, ಚೆನ್ನೈ ಜನವರಿ 3–9, 2015		ಶ್ರೀ ಎ.ಕೆ. ಹುಸೇನ್, ಬಾಸ್ಕೆಟ್ ಬಾಲ್ ಕೋಚ್, ಡಾ. ಎನ್.ಎಸ್.ಎ.ಎಂ. ಪ್ರಥಮ ದರ್ಜೆ ಕಾಲೇಜು, ನಿಟ್ಟೆ	ದ್ವಿತೀಯ ಸುತ್ತಿನಲ್ಲಿ ಸೋಲು

07.	ಚೆಸ್ (ಸಾಮಾನ್ಯ) ವಿ.ಐ.ಟಿ. ಯೂನಿವರ್ಸಿಟಿ, ವೆಲ್ಲೋರ್ ಡಿಸೆಂಬರ್ 14–19, 2014 (ದ. ವ.)	ಶ್ರೀ ಗಣೇಶ್ ಕೋಟ್ಯಾನ್, ದೈಹಿಕ ಶಿಕ್ಷಣ ನಿರ್ದೇಶಕರು, ಯು.ಪಿ.ಎಂ.ಸಿ., ಉಡುಪಿ	ಶ್ರೀ ಪ್ರಸನ್ನ ಕುಮಾರ್, ಡೆರಿಕ್ ಚೆಸ್ ಸ್ಕೂಲ್ ಮಂಗಳೂರು	ದಕ್ಷಿಣ ವಲಯದಲ್ಲಿ 5ನೇ ಸ್ಥಾನ ಪಡೆಯಿತು..
08	ಕ್ರಿಕೆಟ್ (ಪುರುಷರು) ಅಣ್ಣಾ ವಿಶ್ವವಿದ್ಯಾನಿಲಯ, ಚೆನ್ನೈ ನವೆಂಬರ್ 17–27, 2014 ದಕ್ಷಿಣ ವಲಯ	ಶ್ರೀ ಉದಯ ಕುಮಾರ್ ವೈ, ಮಂಗಳೂರು ವಿವಿ ಕ್ರಿಕೆಟ್ ತಂಡದ ಮಾಜಿ ನಾಯಕ, ಕಟಪಾಡಿ, ಉಡುಪಿ	ಶ್ರೀ ಜಯಪ್ರಕಾಶ್, ಪ್ರಿನ್ಸಿಪಾಲ್, ಆಳ್ವಾಸ್ ಕಾಲೇಜ್ ಆಫ್ ಫಿಸಿಕಲ್ ಎಜುಕೇಶನ್, ಮೂಡಬಿದ್ರಿ	ದಕ್ಷಿಣ ವಲಯದಲ್ಲಿ ನಾಲ್ಕನೇ ಸ್ಥಾನ
09	ಗುಡ್ಡಗಾಡು ಓಟ (ಪುರುಷರು ಮತ್ತು ಮಹಿಳೆ0ಯರು) ಮಹಾತ್ಮಾ ಗಾಂಧಿ ವಿಶ್ವವಿದ್ಯಾನಿಲಯ, ಕೊಟ್ಟಾಯಂ 18.10.2014 ಅಖಿಲ ಭಾರತ	ಶ್ರೀ ಕರುಣಾಕರ, ದೈಹಿಕ ಶಿಕ್ಷಣ ನಿರ್ದೇಶಕರು ಶ್ರೀ ರಾಮ ಪ್ರಥಮ ದರ್ಜೆ ಕಾಲೇಜು, ಕಲ್ಲಡ್ಕ ಮೀನಾಕ್ಷಿ ದೈಹಿಕ ಶಿಕ್ಷಣ ನಿರ್ದೇಶಕಿ ಆಳ್ವಾಸ್ ಕಾಲೇಜು, ಮೂಡಬಿದ್ರಿ	ಶ್ರೀ ರಾಧಾಕೃಷ್ಣ ಹೆಚ್.ಬಿ. ದೈಹಿಕ ಶಿಕ್ಷಣ ನಿರ್ದೇಶಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ವಾಮದಪದವು ಶ್ರೀ ರಾಮಕೃಷ್ಣ ಕೆ., ದೈಹಿಕ ಶಿಕ್ಷಣ ನಿರ್ದೇಶಕರು ಸರಕಾರಿ ಪ್ರಥಮ ದರ್ಜೆ ಕಾಲೇಜು, ವಿಟ್ಲ	ಪುರುಷರ ತಂಡ ಅಖಿಲ ಭಾರತ ಮಟ್ಟದಲ್ಲಿ ಮೂರನೇ ಸ್ಥಾನ
10	ಫುಟ್‌ಬಾಲ್ (ಪುರುಷರು) ಕ್ಯಾಲಿಕಟ್ ವಿಶ್ವವಿದ್ಯಾನಿಲಯ ಡಿಸೆಂಬರ್ 13–20, 2014 ದಕ್ಷಿಣ ವಲಯ	ಶ್ರೀ ಶೆಲ್ವೇಂದ್ರನ್ ಸಹ ಪ್ರಾಧ್ಯಾಪಕರು, ಆಳ್ವಾಸ್ ಕಾಲೇಜು, ಮೂಡಬಿದಿ	ಶ್ರೀ ವಿಜಯ ಸುವರ್ಣ, ಟ್ರಾಫಿಕ್ ಇನ್ಸ್‌ಪೆಕ್ಟರ್, ಎನ್.ಎಂ.ಪಿ.ಟ್., ಪಣಂಬೂರು, ಮಂಗಳೂರು	ಮೂರನೇ ಸುತ್ತಿನಲ್ಲಿ ಸೋಲು.
11	ಹ್ಯಾಂಡ್ ಬಾಲ್ (ಪುರುಷರು) ಪೆರಿಯಾರ್ ವಿಶ್ವವಿದ್ಯಾನಿಲಯ, ಸೇಲಂ 29.09.2014ರಿಂದ 03.10.2014	ಸೌಮ್ಯಲತ, ದೈಹಿಕ ಶಿಕ್ಷಣ ನಿರ್ದೇಶಕಿ, ಸ್ಪೈಂಟ್ ಫಿಲೋಮಿನ ಕಾಲೇಜು, ಪುತ್ತೂರು	ಶ್ರೀ ಕಿರಣ ಕುಮಾರ್ ಎ.ಎಸ್., ಅತಿಥಿ ಉಪನ್ಯಾಸಕ, ದೈಹಿಕ ಶಿಕ್ಷಣ ವಿಭಾಗ, ಮಂಗಳೂರು ವಿವಿ	ಪ್ರಥಮ ಸುತ್ತಿನಲ್ಲಿ ಸೋಲು
12.	ಹ್ಯಾಂಡ್ ಬಾಲ್ (ಮಹಿಳೆಯರು) ಪೆರಿಯಾರ್	ಸೌಮ್ಯಲತ, ದೈಹಿಕ ಶಿಕ್ಷಣ ನಿರ್ದೇಶಕಿ, ಸ್ಪೈಂಟ್ ಫಿಲೋಮಿನ	ಶ್ರೀ ಕಿರಣ ಕುಮಾರ್ ಎ.ಎಸ್., ಅತಿಥಿ ಉಪನ್ಯಾಸಕ, ದೈಹಿಕ	ಪ್ರಥಮ ಸುತ್ತಿನಲ್ಲಿ ಸೋಲು

	ವಿಶ್ವವಿದ್ಯಾನಿಲಯ, ಸೇಲಂ 29.09.2014ರಿಂದ 03.10.2014	ಕಾಲೇಜು, ಪುತ್ತೂರು	ಶಿಕ್ಷಣ ವಿಭಾಗ, ಮಂಗಳೂರು ವಿವಿ	
13	ಹಾಕಿ (ಪುರುಷರು) ಅಣ್ಣಾ ವಿಶ್ವವಿದ್ಯಾನಿಲಯ, ಚೆನ್ನೈ ಜನವರಿ 21–27, 2015	ಶ್ರೀ ರಮೇಶ ಹೆಚ್. ಎನ್. ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ	ಶ್ರೀ ಡಾಲ್ವಿನ್ ಡಾಯಸ್, ದೈಹಿಕ ಶಿಕ್ಷಣ ನಿರ್ದೇಶಕರು, ಮಿಲಾಗ್ರಿಸ್ ಕಾಲೇಜು, ಕಲ್ಯಾಣಪುರ	ಕ್ವಾರ್ಟರ್ ಫೈನಲ್‌ನಲ್ಲಿ ಸೋಲು
14	ಹಾಕಿ (ಮಹಿಳೆಯರು) ಅಣ್ಣಾ ವಿಶ್ವವಿದ್ಯಾನಿಲಯ, ಚೆನ್ನೈ ಜನವರಿ 10–14, 2015 (ದ.ವ.) ವಿಬಿಎಸ್. ಪೂರ್ವಾಂಚಲ್ ವಿಶ್ವದ್ಯಾನಿಲಯ, ಜಾನ್ ಪುರ (ಉ.ಪ್ರ) ಫೆಬ್ರವರಿ 20–26, 2015 (ಅಖಿಲ ಭಾರತ)	ಭವ್ಯ, ದೈಹಿಕ ಶಿಕ್ಷಣ ನಿರ್ದೇಶಕಿ ಹಿರಾ ಮಹಿಳೆಯರ ಪ್ರಥಮ ದರ್ಜೆ ಕಾಲೇಜು, ಬಬ್ಬುಕಟ್ಟೆ ಭವ್ಯ, ದೈಹಿಕ ಶಿಕ್ಷಣ ನಿರ್ದೇಶಕಿ ಹಿರಾ ಮಹಿಳೆಯರ ಪ್ರಥಮ ದರ್ಜೆ ಕಾಲೇಜು, ಬಬ್ಬುಕಟ್ಟೆ	ಡಾ. ಜೆರಾಲ್ಡ್ ಎಸ್. ಡಿ'ಸೋಜ, ದೈಹಿಕ ಶಿಕ್ಷಣ ಉಪನಿರ್ದೇಶಕರು, ಮಂಗಳೂರು ವಿಶ್ವವಿದ್ಯಾನಿಲಯ ಶ್ರೀ ವಿವೇಕ್ ಚತುರ್ವೇದಿ ಹಾಕಿ ಎಸ್.ಎ.ಐ. ಸೆಂಟರ್, ಮಡಿಕೇರಿ	ದಕ್ಷಿಣ ವಲಯ: ಪ್ರಥಮ ಸ್ಥಾನ ಅಖಿಲ ಭಾರತ: ಭಾಗವಹಿಸಿದರು
15.	ಕಬಡ್ಡಿ (ಪುರುಷರು) ವೆಲ್ಸ್ ವಿಶ್ವವಿದ್ಯಾನಿಲಯ, ಚೆನ್ನೈ ಡಿಸೆಂಬರ್ 20–24, 2014 (ದಕ್ಷಿಣ ವಲಯ)	ಶ್ರೀ ಮೊಹಮ್ಮದ್ ರಫೀಕ್, ದೈಹಿಕ ಶಿಕ್ಷಣ ನಿರ್ದೇಶಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಮಂಗಳೂರು, ಕಾರ್ ಸ್ಟ್ರೀಟ್.	ಶ್ರೀ ಸತೀಶ್ ನಾಯಕ್, ಕಬಡ್ಡಿ ಕೋಚ್, ಆಳ್ವಾಸ್ ಎಜುಕೇಶನ್ ಫೌಂಡೇಶನ್, ಮೂಡಬಿದ್ರಿ	ಪ್ರಿ–ಕ್ವಾರ್ಟರ್ ಫೈನಲಿನಲ್ಲಿ ಸೋಲು.
16.	ಕಬಡ್ಡಿ (ಮಹಿಳೆಯರು) ಕಣ್ಣೂರು ವಿಶ್ವವಿದ್ಯಾನಿಲಯ, ಕಣ್ಣೂರು ನವೆಂಬರ್ 1–5, 2014 (ದಕ್ಷಿಣ ವಲಯ)	ಶ್ರೀಮತಿ ಹಂಸವತಿ ದೈಹಿಕ ಶಿಕ್ಷಣ ನಿರ್ದೇಶಕರು ಆಳ್ವಾಸ್ ಕಾಲೇಜು, ಮೂಡಬಿದ್ರಿ ಶ್ರೀಮತಿ ಹಂಸವತಿ	ಶ್ರೀ ಕಿರಣ ಕುಮಾರ್ ಎ.ಎಸ್., ಅತಿಥಿ ಉಪನ್ಯಾಸಕ, ದೈಹಿಕ ಶಿಕ್ಷಣ ವಿಭಾಗ, ಮಂಗಳೂರು ವಿವಿ ಶ್ರೀ ಕಿರಣ ಕುಮಾರ್	ದಕ್ಷಿಣ ವಲಯ: ಮೂರನೇ ಸ್ಥಾನ ಅಖಿಲ ಭಾರತ ಸ್ಪರ್ಧೆಯಲ್ಲಿ ಭಾಗವಹಿಸಿತು.

	ಕೆ.ಐ.ಐ.ಟಿ. ವಿಶ್ವವಿದ್ಯಾನಿಲಯ, ಭುವನೇಶ್ವರ (ಒರಿಸ್ಸ) ಡಿಸೆಂಬರ್ 26–30, 2014	ದೈಹಿಕ ಶಿಕ್ಷಣ ನಿರ್ದೇಶಕರು ಆಳ್ವಾಸ್ ಕಾಲೇಜು, ಮೂಡಬಿದಿ	ಎ.ಎಸ್., ಅತಿಥಿ ಉಪನ್ಯಾಸಕ, ದೈಹಿಕ ಶಿಕ್ಷಣ ವಿಭಾಗ, ಮಂಗಳೂರು ವಿವಿ	
17	ಖೋ–ಖೋ (ಪುರುಷರು), ಅಣ್ಣ ವಿಶ್ವವಿದ್ಯಾನಿಲಯ, ಚೆನ್ನೈ ಡಿಸೆಂಬರ್ 26–30, 2014 (ದಕ್ಷಿಣ ವಲಯ)	ಶ್ರೀ ದಯಾಕರ್ ಬಿ. ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು	ಶ್ರೀ ಪ್ರೀತಿ ಶರತ್, ಖೋ–ಖೋ ಕೋಚ್, ಆಳ್ವಾಸ್ ಕಾಲೇಜು, ಮೂಡಬಿದ್ರಿ	ಕ್ವಾರ್ಟರ್ ಫೈನಲ್‌ನಲ್ಲಿ ಸೋಲು
18	ಖೋ–ಖೋ (ಮಹಿಳೆಯರು) ಅಣ್ಣ ವಿಶ್ವವಿದ್ಯಾನಿಲಯ, ಚೆನ್ನೈ ಅಕ್ಟೋಬರ್ 18–20, 2014 (ದಕ್ಷಿಣ ವಲಯ) ಜೆ.ಆರ್.ಎನ್. ರಾಜಸ್ಥಾನ್ ವಿದ್ಯಾಪೀಠ ಉದಯಪುರ ಜನವರಿ 13–17, 2015 (ಅಖಿಲ ಭಾರತ)	ಶ್ರೀಮತಿ ಶುಭ ಕೆ.ಹೆಚ್. ದೈಹಿಕ ಶಿಕ್ಷಣ ನಿರ್ದೇಶಕಿ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಮಂಗಳೂರು –ಅದೇ–	ಶ್ರೀ ಪ್ರೀತಿ ಶರತ್, ಖೋ–ಖೋ ಕೋಚ್, ಆಳ್ವಾಸ್ ಕಾಲೇಜು, ಮೂಡಬಿದ್ರಿ –ಅದೇ–	ದಕ್ಷಿಣ ವಲಯ: ಮೂರನೇ ಸ್ಥಾನ ಅಖಿಲ ಭಾರತ : ಕಂಚಿನ ಪದಕ .
19	ಸಾಫ್ಟ್ ಬಾಲ್ (ಪುರುಷರು) ದೆಹಲಿ ವಿಶ್ವವಿದ್ಯಾನಿಲಯ ಮಾರ್ಚ್ 3–8, 2015 ಅಖಿಲ ಭಾರತ	ಶ್ರೀ ರಂಜಿತ್ ಟಿ.ಎನ್. ದೈಹಿಕ ಶಿಕ್ಷಣ ನಿರ್ದೇಶಕರು, ಡಾ. ಬಿ.ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜು, ಕುಂದಾಪುರ	ಶ್ರೀ ರತ್ನಾಕರ ಪ್ರತಿ, ಸಹ ಪ್ರಾಧ್ಯಾಪಕರು, ಆಳ್ವಾಸ್ ಕಾಲೇಜ್ ಆಫ್ ಫಿಸಿಕಲ್ ಎಜುಕೇಶನ್, ಮೂಡಬಿದ್ರಿ	ಪ್ರಥಮ ಸುತ್ತಿನಲ್ಲಿ ಸೋಲು
20.	ಸಾಫ್ಟ್ ಬಾಲ್ (ಮಹಿಳೆಯರು)	ಸೌಮ್ಯ ಕೆ.ಪಿ., ದೈಹಿಕ ಶಿಕ್ಷಣ	ಶ್ರೀ ರತ್ನಾಕರ ಪ್ರತಿ, ಸಹ ಪ್ರಾಧ್ಯಾಪಕರು,	

	ದೆಹಲಿ ವಿಶ್ವವಿದ್ಯಾನಿಲಯ ಫೆಬ್ರವರಿ 23–28, 2015 ಅಖಿಲ ಭಾರತ	ನಿರ್ದೇಶಕಿ, ಕಣಚೂರು ಇನ್ ಸ್ಟಿಟ್ಯೂಟ್ ಆಫ್ ಮೆನೆಜ್ ಮೆಂಟ್, ದೇರಳಕಟ್ಟೆ, ಮಂಗಳೂರು	ಆಳ್ವಾಸ್ ಕಾಲೇಜ್ ಆಫ್ ಫಿಸಿಕಲ್ ಎಜುಕೇಶನ್, ಮೂಡಬಿದ್ರಿ	ಮೂರನೇ ಸುತ್ತಿನಲ್ಲಿ ಸೋಲು
21	ಟೇಬಲ್ ಟೆನ್ನಿಸ್ (ಪುರುಷರು ಮತ್ತು ಮಹಿಳೆಯರು) ಎಸ್.ಆರ್.ಎಂ. ಯೂನಿವರ್ಸಿಟಿ, ಚೆನ್ನೈ 30.09.2014ರಿಂದ 3.10.2014ರವರೆಗೆ ದಕ್ಷಿಣ ವಲಯ	ಸೌಮ್ಯ ಟಿ.ಎನ್. ದೈಹಿಕ ಶಿಕ್ಷಣ ನಿರ್ದೇಶಕಿ, ಬೆಸೆಂಟ್ ಮಹಿಳೆಯರ ಕಾಲೇಜು, ಮಂಗಳೂರು	ಶ್ರೀ ಕುಶಾಲಪ್ಪ ಎ.ಎ. ದೈಹಿಕ ಶಿಕ್ಷಣ ನಿರ್ದೇಶಕರು ಕಾವೇರಿ ಕಾಲೇಜು, ವಿರಾಜಪೇಟೆ	ಪುರುಷರು: ದ್ವಿತೀಯ ಸುತ್ತಿನಲ್ಲಿ ಸೋಲು. ಮಹಿಳೆಯರು: ಮೂರನೇ ಸುತ್ತಿನಲ್ಲಿ ಸೋಲು.
22	ವಾಲಿಬಾಲ್ (ಪುರುಷರು) ಕೃಷ್ಣ ವಿಶ್ವವಿದ್ಯಾನಿಲಯ, ಮಛಲಿಪಟ್ಟಂ ಅಕ್ಟೋಬರ್ 8–12, 2014 ದಕ್ಷಿಣ ವಲಯ	ಶ್ರೀ ಜಯರಾಮ್ ರೈ ದೈಹಿಕ ಶಿಕ್ಷಣ ನಿರ್ದೇಶಕರು, ಎಸ್.ಡಿ.ಪಿ.ಟಿ. ಪ್ರಥಮ ದರ್ಜೆ ಕಾಲೇಜು, ಕಟೀಲು	ಶ್ರೀ ಜಿ. ನಾರಾಯಣ ಆಳ್ವ, ವಾಲಿಬಾಲ್ ಕೋಚ್, ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ, ಬೆಂಗಳೂರು	ಪ್ರಿ–ಕ್ವಾರ್ಟರ್ ಫೈನಲ್‌ನಲ್ಲಿ ಸೋಲು
23.	ವಾಲಿಬಾಲ್ (ಮಹಿಳೆಯರು) ಮದ್ರಾಸ್ ವಿಶ್ವವಿದ್ಯಾನಿಲಯ, ಚೆನ್ನೈ ಡಿಸೆಂಬರ್ 26–28, 2014 ದಕ್ಷಿಣ ವಲಯ	ಕು. ವಿದ್ಯಾ ಕೆ.ಯು. ದೈಹಿಕ ಶಿಕ್ಷಣ ನಿರ್ದೇಶಕಿ ಸರಕಾರಿ ಪ್ರಥಮ ದರ್ಜೆ ಕಾಲೇಜು, ಕಾಪು	ಶ್ರೀ ಪಂಪಾಪತಿ ವಾಲಿಬಾಲ್ ಕೋಚ್, ಆಳ್ವಾಸ್ ಕಾಲೇಜು, ಮೂಡಬಿದ್ರಿ	ಪ್ರಿ–ಕ್ವಾರ್ಟರ್ ಫೈನಲ್‌ನಲ್ಲಿ ಸೋಲು
24	ವೆಯ್ಟ್ ಲಿಫ್ಟಿಂಗ್, ಪವರ್ ಲಿಫ್ಟಿಂಗ್ (ಪುರುಷರು ಮತ್ತು ಮಹಿಳೆಯರು) ಮತ್ತು ಬೆಸ್ಟ್ ಫಿಸಿಕ್ (ಪುರುಷರು) ಪಂಜಾಬ್ ಟೆಕ್ನಿಕಲ್ ವಿಶ್ವವಿದ್ಯಾನಿಲಯ, ಜಲಂಧರ (ಪಂಜಾಬ್) ಮಾರ್ಚ್ 1–3. 2015(ಮ) ಮಾರ್ಚ್ 6–9, 2015 (ಪು) ಅಖಿಲ ಭಾರತ	1. ಹರೀಶ್ ಗೌಡ, ದೈಹಿಕ ಶಿಕ್ಷಣ ನಿರ್ದೇಶಕರು, ಮೋತಿ ಮಹಲ್ ಕಾಲೇಜ್ ಆಫ್ ಹೋಟೆಲ್ ಮೆನೆಜ್ ಮೆಂಟ್, ಮಂಗಳೂರು 2. ಕು. ವಸುಧ ದೈಹಿಕ ಶಿಕ್ಷಣ ನಿರ್ದೇಶಕಿ ಸೈಂಟ್ ಆಗ್ನೆಸ್ ಕಾಲೇಜು, ಮಂಗಳೂರು	1. ಪ್ರಮೋದ್ ಕುಮರ್, ಕೋಚ್, ಆಳ್ವಾಸ್ ಕಾಲೇಜು, ಮೂಡಬಿದ್ರಿ 2. ಹರಿದಾಸ್ ಕೆ. ದೈಹಿಕ ಶಿಕ್ಷಣ ನಿರ್ದೇಶಕರು, ಎಫ್.ಎಮ್.ಕೆ.ಎಂ.ಸಿ., ಮಡಿಕೇರಿ 3. ಶ್ರೀ ರಾಜೇಂದ್ರ ದೈಹಿಕ ಶಿಕ್ಷಣ ನಿರ್ದೇಶಕರು, ಎಸ್.ಡಿ.ಎಂ. ಕಲೇಜ್ ಆಫ್ ಟೆಕ್ನಾಲಜಿ, ಉಜಿರೆ	ಪುರುಷರು: • ಶ್ರೀ ಜಯದೀಪ್ ಕೃಷ್ಣ ಪಿ.ಸಿ., ಆಳ್ವಾಸ್ ಕಾಲೇಜು, ಮೂಡಬಿದ್ರಿ, ಇವರು 83 ಕೆಜಿ ಕೆಟಗಿರಿ ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಚಿನ್ನದ ಪದಕ. • ಶ್ರೀ ಗುರುರಾಜ್, ಎಸ್.ಡಿ.ಎಂ. ಕಾಲೇಜು, ಉಜಿರೆ, ಇವರು 56 ಕೆ.ಜಿ. ಕೆಟಗಿರಿ ವೆಯ್ಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಚಿನ್ನದ ಪದಕ • ಶ್ರೀ ರಕ್ಷಿತ್, ಆಳ್ವಾಸ್ ಕಾಲೇಜು, ಮೂಡಬಿದ್ರಿ, ಇವರು 65 ಕೆಜಿ ಕೆಟಗಿರಿ ಬೆಸ್ಟ್ ಫಿಸಿಕ್ ಸ್ಪರ್ಧೆಯಲ್ಲಿ ಚಿನ್ನದ ಪದಕ • ಶ್ರೀ ಅರುಣ, ಎಸ್.ಡಿ.ಎಂ. ಕಾಲೇಜು, ಉಜಿರೆ, ಇವರು 77 ಕೆಜಿ ಕೆಟಗಿರಿ ವೆಯ್ಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಬೆಳ್ಳಿಯ ಪದಕ

				ಮಹಿಳೆಯರು: ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಸಮಗ್ರ ದ್ವಿತೀಯ ಸ್ಥಾನವನ್ನು • ಅಖಿಲಾ, ಎಸ್.ಡಿ.ಎಂ. ಕಾಲೇಜು, ಉಜಿರೆ, ಇವರು +84 ಕೆ.ಜಿ. ಕೆಟಗಿರಿ ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಚಿನ್ನದ ಪದಕ • ಜ್ಯೈತ್ರ, ಡಾ. ಎನ್.ಎಸ್.ಎ.ಎಂ. ಪ್ರಥಮ ದರ್ಜೆ ಕಾಲೇಜು, ನಿಟ್ಟೆ, ಇವರು 47 ಕೆ.ಜಿ. ಕೆಟಗಿರಿ ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಕಂಚಿನ ಪದಕ
